# ಅಧ್ಯಾಯ–II

# ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿಯ ಸ್ಥಿತಿ

# ಅಧ್ಯಾಯ–II

## ಪ್ರಮುಖ ಕಾರ್ಯಕ್ಷಮತಾ ಸೂಚಕಗಳ ಸಂಬಂಧವಾಗಿ ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿಯ ಸ್ಥಿತಿ

*ನೀತಿ ಆಯೋಗದ ಸೂಚ್ಯಂಕಗಳು, ಬಹು ಆಯಾಮದ ಬಡತನ ಸೂಚ್ಯಂಕಗಳು ಇತ್ಯಾದಿಗಳಂತಹ ವಿವಿಧ ಅಭಿವೃದ್ಧಿ ಸೂಚಕಗಳ ವಿಷಯದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶವು ಹಿಂದುಳಿದಿತ್ತು ಮತ್ತು ಸಂವಿಧಾನದ 371–ಜೆ ವಿಧಿಯಡಿಯಲ್ಲಿ ಮಂಡಳಿಯನ್ನು ಸ್ಥಾಪಿಸಿದ ನಂತರವೂ ರಾಜ್ಯದ ಉಳಿದ ಭಾಗಗಳಿಗೆ ಹೋಲಿಸಿದರೆ ಸಾಮಾಜಿಕ–ಆರ್ಥಿಕ ಸೂಚಕಗಳು ಕೆಳಮಟ್ಟದಲ್ಲಿಯೇ ಉಳಿದಿದ್ದವು. ಅಭಿವೃದ್ಧಿ, ಯೋಜನೆ ಮತ್ತು ಕಾರ್ಯಕ್ರಮದ ಅನುಷ್ಠಾನದ ಸ್ಥಿತಿಯನ್ನು ಅಳೆಯುವಲ್ಲಿ ಅಗತ್ಯವಾಗಿದ್ದ ಸ್ಥಿರ ಅಭಿವೃದ್ಧಿ ಗುರಿಗಳ ಸೂಚಕ ಚೌಕಟ್ಟು, ನೀತಿ ಆಯೋಗದ ಮಹತ್ವಾಕಾಂಕ್ಷೆಯ ಜಿಲ್ಲಾ ಸೂಚಕ ಚೌಕಟ್ಟು, ಮಾನವ ಅಭಿವೃದ್ಧಿ ಸೂಚ್ಯಂಕ, ಡಾ.ನಂಜುಂಡಪ್ಪ ಸಮಿತಿಯ ವರದಿ ಇತ್ಯಾದಿಗಳಲ್ಲಿ ನಿರ್ದಿಷ್ಟಪಡಿಸಿದ ದತ್ತಾಂಶಗಳು ಮಂಡಳಿಯಲ್ಲಿ ಲಭ್ಯವಿರಲಿಲ್ಲ. ಸೂಕ್ತ ಸೂಚಕಗಳನ್ನು ಉಲ್ಲೇಖಿಸಿ ವಿವಿಧ ವಲಯಗಳಲ್ಲಿನ ಅಭಿವೃದ್ಧಿಯ ಸಾಪೇಕ್ಷ ಮಟ್ಟವನ್ನು ಖಚಿತಪಡಿಸಿಕೊಳ್ಳುವುದು ಅವಶ್ಯಕವಾಗಿದ್ದರೂ ಸಹ ಮಂಡಳಿಯು ವಿಶ್ಲೇಷಣೆಗೆ ಅಗತ್ಯವಾದ ದತ್ತಾಂಶವನ್ನು ಸಂಗ್ರಹಿಸಿರಲಿಲ್ಲ. ಮಂಡಳಿಯಲ್ಲಿ ಯಾವುದೇ ಮಾಹಿತಿಯ ಅನುಪಸ್ಥಿತಿಯಲ್ಲಿ, ಪ್ರಾದೇಶಿಕ ಅಸಮಾನತೆಯನ್ನು ಕಡಿಮೆ ಮಾಡಲು ಅದರ ಚಟುವಟಿಕೆಗಳ ಫಲಿತಾಂಶದ ಮೌಲ್ಯಮಾಪನ ಮಾಡುವುದು ಕಾರ್ಯಸಾಧ್ಯವಾಗಿರಲಿಲ್ಲ ಮತ್ತು ಮಂಡಳಿಯು ತನ್ನ ಕಾರ್ಯಾಚರಣೆಗಳ ಪರಿಣಾಮಕಾರಿತ್ವವನ್ನು ಅಳೆಯಬಹುದಾದ ಪರಿಭಾಷೆಯಲ್ಲಿ ಪ್ರದರ್ಶಿಸಲು ಸಾಧ್ಯವಾಗಲಿಲ್ಲ.*

ಸಾಮಾಜಿಕ–ಆರ್ಥಿಕ ಸೂಚಕಗಳ ಗುಂಪನ್ನು ಬಳಸಿಕೊಂಡು ಇತರ ಪ್ರದೇಶಗಳಿಗೆ ಸಂಬಂಧಿಸಿದಂತೆ ಪ್ರದೇಶವೊಂದರ ಹಿಂದುಳಿದಿರುವಿಕೆಯನ್ನು ನಿರ್ಧರಿಸಲಾಗುತ್ತದೆ. ಬಹು ಅಧ್ಯಯನಗಳು[2] ವಿಭಿನ್ನ ಅಭಿವೃದ್ಧಿ ಸೂಚಕಗಳನ್ನು ಬಳಸಿಕೊಂಡು ಕಲ್ಯಾಣ ಕರ್ನಾಟಕ ಪ್ರದೇಶದ ಹಿಂದುಳಿದಿರುವಿಕೆಯನ್ನು ಎತ್ತಿ ತೋರಿಸಿವೆ. ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನವನ್ನು ಪ್ರಸ್ತಾಪಿಸುವಾಗ ಸಂವಿಧಾನದ 371–ಜೆ ವಿಧಿಯನ್ನು ಪರಿಗಣಿಸಿದ ಸಂಸದೀಯ ಸ್ಥಾಯಿ ಸಮಿತಿಯು ಈ ಅಧ್ಯಯನ ವರದಿಗಳನ್ನು ಗಮನಕ್ಕೆ ತೆಗೆದುಕೊಂಡಿತ್ತು.

ಯೋಜಿತ ಉದ್ದೇಶಗಳನ್ನು ಸಾಧಿಸಲು ಯೋಜನೆ ಮತ್ತು ಪ್ರಗತಿಯನ್ನು ಅಳೆಯುವಲ್ಲಿ ಸೂಚಕಗಳ ಪ್ರಾಮುಖ್ಯತೆಯನ್ನು ಜಾಗತಿಕವಾಗಿ ಗುರುತಿಸಲಾಗಿದೆ. ಪ್ರಪಂಚದಾದ್ಯಂತ ಸರ್ಕಾರಗಳು ಸಹಸ್ರಮಾನದ ಅಭಿವೃದ್ಧಿ ಗುರಿಗಳು ಮತ್ತು ಅದರ ಉತ್ತರಾಧಿಕಾರಿ ಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಸೂಚಕ ಚೌಕಟ್ಟು ಮತ್ತು ಸಂಬಂಧಿತ ಮೇಲ್ವಿಚಾರಣಾ ವ್ಯವಸ್ಥೆಗಳಿಗೆ ಹೆಚ್ಚಿನ ಗಮನವನ್ನು ನೀಡುತ್ತಿವೆ. ಪ್ರಾದೇಶಿಕ ಅಸಮತೋಲನವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಅಭಿವೃದ್ಧಿ ಕಾರ್ಯತಂತ್ರವನ್ನು ಅಭಿವೃದ್ಧಿಪಡಿಸಿ ಕಾರ್ಯಗತಗೊಳಿಸಲು ನಿರ್ದಿಷ್ಟಪಡಿಸಿದ ಸೂಚಕಗಳಿಗೆ ಪ್ರತಿಯಾಗಿ ಕಾಲಕಾಲಕ್ಕೆ ಪ್ರದೇಶದ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯ ಮಟ್ಟವನ್ನು ಮೌಲ್ಯಮಾಪನ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿತ್ತು. ಪ್ರಾದೇಶಿಕ ಅಭಿವೃದ್ಧಿಯ ಗುರಿಗಳೊಂದಿಗೆ ಜೋಡಿಸಲಾದ ಸಮಗ್ರ ಸೂಚಕ ಚೌಕಟ್ಟು ಅನುಷ್ಠಾನ ತಂತ್ರಗಳನ್ನು ಮತ್ತು ಸಂಪನ್ಮೂಲಗಳ ಹಂಚಿಕೆಯನ್ನು ಅಭಿವೃದ್ಧಿಪಡಿಸಲು ನಿರ್ವಹಣಾ ಸಾಧನವಾಗಿ ಕಾರ್ಯನಿರ್ವಹಿಸುತ್ತದೆ.

[2] ಪ್ರಾದೇಶಿಕ ಅಸಮತೋಲನದ ಮೇಲಿನ ಉನ್ನತಾಧಿಕಾರ ಸಮಿತಿಯ ವರದಿ (ಡಾ.ನಂಜುಂಡಪ್ಪ ಸಮಿತಿ ವರದಿ), ಶ್ರೀಮತಿ ಶಾಲಿನಿ ರಜನೀಶ್, ಐಎಎಸ್ ಮುಂತಾದವರು ಸಹ–ಲೇಖಕರಾದ ಇನ್‌ಕ್ಲೂಸೀವ್ ಗ್ರೋತ್ ಪುಸ್ತಕ.

ಮಂಡಳಿಯ ಆದೇಶದ 2013ರ ಷರತ್ತು 12ರ ಪ್ರಕಾರ, ಸಂಪೂರ್ಣ ರಾಜ್ಯದ ಅಭಿವೃದ್ಧಿಯ ಮಟ್ಟವನ್ನು ಪರಿಗಣಿಸಿ ಮಂಡಳಿಯು ಕಾಲಕಾಲಕ್ಕೆ ಪ್ರದೇಶಕ್ಕೆ ಸಂಬಂಧಿಸಿದಂತೆ ವಿವಿಧ ಕ್ಷೇತ್ರಗಳಲ್ಲಿನ ಅಭಿವೃದ್ಧಿಯ ಸಾಪೇಕ್ಷ ಮಟ್ಟವನ್ನು ಸೂಕ್ತವಾದ ಸೂಚಕಗಳ ಆಧಾರದ ಮೇಲೆ ನಿರ್ಣಯಿಸುತ್ತದೆ. ಮಂಡಳಿಯ ಆದೇಶ 2013ರ ಷರತ್ತು 19 ಮಂಡಳಿಯು ಸಾಮಾಜಿಕ–ಆರ್ಥಿಕ ಸೂಚಕಗಳನ್ನು ಮೇಲ್ವಿಚಾರಣೆ ಮಾಡಲು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು ಮತ್ತು ಪ್ರಾಧಿಕಾರಗಳಿಂದ ಅಗತ್ಯ ಮಾಹಿತಿಯನ್ನು ಸಂಗ್ರಹಿಸಲು ಮಂಡಳಿಯನ್ನು ಶಕ್ತಗೊಳಿಸುತ್ತದೆ.

ಮಂಡಳಿಯು ಪ್ರದೇಶಕ್ಕೆ ಸೂಕ್ತವಾದ ಸೂಚಕ ಚೌಕಟ್ಟನ್ನು ಔಪಚಾರಿಕವಾಗಿ ಅಂತಿಮಗೊಳಿಸಬೇಕಾಗಿತ್ತು. ಮಂಡಳಿಯು ಸಾಮಾನ್ಯವಾಗಿ ಎಲ್ಲಾ ನಿಯತಾಂಕಗಳಿಗಾಗಿ ಡಾ.ನಂಜುಂಡಪ್ಪ ಸಮಿತಿಯ ವರದಿಯನ್ನು ಉಲ್ಲೇಖಿಸುತ್ತದೆಯಾದರೂ, ನಿಗದಿತ ಸಮಯದ ಜೊತೆಗೆ ಅಳೆಯಬಹುದಾದ ಪರಿಭಾಷೆಯಲ್ಲಿ ಪ್ರಾದೇಶಿಕ ಅಭಿವೃದ್ಧಿಯ ಗುರಿಗಳನ್ನು ಇನ್ನೂ ವ್ಯಾಖ್ಯಾನಿಸಿರಲಿಲ್ಲ. ವ್ಯಾಖ್ಯಾನಿಸಲಾದ ಗುರಿಗಳು ಮತ್ತು ಸಮಯಾವಧಿಯ ಅನುಪಸ್ಥಿತಿಯಲ್ಲಿ, ಸೂಚಕಗಳ ಪರಿಭಾಷೆಯಲ್ಲಿ ಮಂಡಳಿಯ ಚಟುವಟಿಕೆಗಳ ಫಲಿತಾಂಶಗಳನ್ನು ನಿರ್ಣಯಿಸಲು ಲೆಕ್ಕಪರಿಶೋಧನೆಗೆ ಸವಾಲಾಗಿತ್ತು.


ರಾಜ್ಯದ ಇತರ ಭಾಗಗಳಿಗೆ ಹೋಲಿಸಿದರೆ ಪ್ರದೇಶದ ಅಭಿವೃದ್ಧಿಯ ಸ್ಥಿತಿಯನ್ನು ನಿರ್ಣಯಿಸಲು ಸರ್ಕಾರದ ವಿವಿಧ ಇಲಾಖೆಗಳಿಂದ ದತ್ತಾಂಶವನ್ನು ಸಂಗ್ರಹಿಸಲು ಲೆಕ್ಕಪರಿಶೋಧನೆಯು ಪ್ರಯತ್ನಿಸಿತು. ಸಂಗ್ರಹಿಸಿದ ದತ್ತಾಂಶದ ಆಧಾರದ ಮೇಲೆ ಕಲ್ಯಾಣ–ಕರ್ನಾಟಕ ಪ್ರದೇಶದ ಜಿಲ್ಲೆಗಳ ಅಭಿವೃದ್ಧಿಯ ಸ್ಥಿತಿಯನ್ನು ನಿರ್ಣಯಿಸಲಾಯಿತು. ತಾಲೂಕು ಮಟ್ಟದಲ್ಲಿ ವಿವರವಾದ ದತ್ತಾಂಶ ಲಭ್ಯವಿಲ್ಲದ ಕಾರಣ ತಾಲೂಕು ಮಟ್ಟದಲ್ಲಿ ಸಾಮಾಜಿಕ–ಅಭಿವೃದ್ಧಿ ಸೂಚಕಗಳ ಮೌಲ್ಯಮಾಪನವನ್ನು ಕೈಗೊಳ್ಳಲಾಗಲಿಲ್ಲ. ವಿವಿಧ ಸೂಚಕಗಳನ್ನು ಉಲ್ಲೇಖಿಸಿ ಪ್ರದೇಶದ ಸ್ಥಿತಿಯನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

## 2.1 ನೀತಿ ಆಯೋಗದ ಮಹತ್ವಾಕಾಂಕ್ಷೆಯ ಜಿಲ್ಲಾ ಕಾರ್ಯಕ್ರಮದ ಸೂಚಕಗಳ ಆಧಾರದ ಮೇಲೆ ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಿತಿ

ನೀತಿ ಆಯೋಗವು ತನ್ನ ಮಹತ್ವಾಕಾಂಕ್ಷೆಯ ಜಿಲ್ಲಾ ಕಾರ್ಯಕ್ರಮದಡಿಯಲ್ಲಿ ವಿವಿಧ ಜಿಲ್ಲೆಗಳ ಅಭಿವೃದ್ಧಿಯ ಸ್ಥಿತಿಯನ್ನು ನಿರ್ಣಯಿಸಲು ಮತ್ತು ಮೇಲ್ವಿಚಾರಣೆ ಮಾಡಲು ಐದು ವಿಷಯಗಳಾದ್ಯಂತ 49 ಸೂಚಕಗಳನ್ನು ಒಳಗೊಂಡಿರುವ ಸೂಚಕ ಚೌಕಟ್ಟನ್ನು ಬಳಸುತ್ತದೆ. ಆ ಐದು ವಿಷಯಗಳೆಂದರೆ ಆರೋಗ್ಯ ಮತ್ತು ಪೋಷಣೆ, ಶಿಕ್ಷಣ, ಕೃಷಿ ಮತ್ತು ಜಲ ಸಂಪನ್ಮೂಲಗಳು, ಆರ್ಥಿಕ ಸೇರ್ಪಡೆ ಮತ್ತು ಕೌಶಲ್ಯ ಅಭಿವೃದ್ಧಿ ಹಾಗೂ ಮೂಲಸೌಕರ್ಯ.

ಲೆಕ್ಕಪರಿಶೋಧನೆಯು ಈ ಸೂಚಕ ಚೌಕಟ್ಟಿನ ಆಧಾರದ ಮೇಲೆ ಪ್ರದೇಶದ ಅಭಿವೃದ್ಧಿಯ ಸ್ಥಿತಿಯನ್ನು ವಿಶ್ಲೇಷಿಸಿತು ಮತ್ತು ಕೆಳಗಿನ **ನಕ್ಷೆ–2.1**ರಲ್ಲಿ ಚಿತ್ರಿಸಿರುವಂತೆ ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳು ರಾಜ್ಯದ ಉಳಿದ ಭಾಗಗಳಿಗಿಂತ ಹಿಂದುಳಿದಿದ್ದವು ಎಂಬುದನ್ನು ಗಮನಿಸಲಾಯಿತು.

**ನಕ್ಷೆ–2.1: ನೀತಿ ಆಯೋಗದ ಮಹತ್ವಾಕಾಂಕ್ಷೆಯ ಜಿಲ್ಲೆಗಳ ಸೂಚ್ಯಂಕ**




ಬಣ್ಣವು ಜಿಲ್ಲೆಯ ಮಹತ್ವಾಕಾಂಕ್ಷೆಯ ಸೂಚ್ಯಂಕವನ್ನು ಪ್ರತಿನಿಧಿಸುತ್ತದೆ. ಅಂಕ ಹೆಚ್ಚಾದಂತೆ ಬಣ್ಣವು ಕೆಂಪು ಬಣ್ಣದಿಂದ ಕಿತ್ತಳೆ, ಹಳದಿ ಮೂಲಕ ಹಸಿರು ಬಣ್ಣಕ್ಕೆ ಬದಲಾಗುತ್ತದೆ. ಹಸಿರು ಬಣ್ಣ ಅತಿ ಹೆಚ್ಚು ಸೂಚ್ಯಂಕವನ್ನು ಹೊಂದಿರುವ ಪ್ರದೇಶಗಳನ್ನು ಪ್ರತಿನಿಧಿಸಿದರೆ ಕೆಂಪು ಬಣ್ಣ ಕಡಿಮೆ ಸೂಚ್ಯಂಕವನ್ನು ಹೊಂದಿರುವ ಪ್ರದೇಶಗಳನ್ನು ಪ್ರತಿನಿಧಿಸುತ್ತದೆ.
ಆಧಾರ: ಯೋಜನಾ ಇಲಾಖೆಯ ಅವಲೋಕನ ದತ್ತಸಂಚಯ

ಎನ್‌ಐಟಿಐ ಆಯೋಗದ ಸೂಚಕ ಚೌಕಟ್ಟಿನ ಪ್ರಕಾರ, ರಾಜ್ಯದ ಸರಾಸರಿ 44.85 ಮೂಲ ಅಂಕಗಳಾಗಿತ್ತು. ಕಲ್ಯಾಣ ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳ ಪೈಕಿ ಯಾದಗಿರಿ, ರಾಯಚೂರು, ಬಿದರ್ ಮತ್ತು ಕಲಬುರಗಿ, ಈ ನಾಲ್ಕು ಜಿಲ್ಲೆಗಳು ರಾಜ್ಯದ ಉಳಿದ ಸರಾಸರಿಗೆ ಹೋಲಿಸಿದರೆ ಕಡಿಮೆ ಮಟ್ಟದಲ್ಲಿವೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ತಾಲೂಕುವಾರು ದತ್ತಾಂಶಗಳ ವಿಶ್ಲೇಷಣೆಯು ರಾಜ್ಯದಲ್ಲಿ 44.85 ಮೂಲ ಅಂಕಗಳಿಗಿಂತ ಕಡಿಮೆ ಸರಾಸರಿ ಅಂಕ ಹೊಂದಿರುವ ಕಡಿಮೆ ಕಾರ್ಯಕ್ಷಮತೆಯ 75 ತಾಲೂಕುಗಳ ಪೈಕಿ 29 ತಾಲೂಕುಗಳು ಕಲ್ಯಾಣ ಕರ್ನಾಟಕ ಪ್ರದೇಶದಿಂದ ಆಗಿದ್ದು ಹೆಚ್ಚಿನ ಅಸಮಾನತೆಗಳನ್ನು ತೋರಿಸಿತು. ಅವುಗಳಲ್ಲಿ ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳು ಮತ್ತು ಬೀದರ್ ಜಿಲ್ಲೆಯ ಎಂಟರ ಪೈಕಿ ಏಳು ತಾಲ್ಲೂಕುಗಳಲ್ಲಿ[3] ರಾಜ್ಯದ ಸರಾಸರಿಗಿಂತ ಕಡಿಮೆ ಇರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತಾಲೂಕುಗಳ ಪ್ರದೇಶವಾರು ಕಾರ್ಯಕ್ಷಮತೆಯನ್ನು ಕೆಳಗಿನ **ಕೋಷ್ಟಕ–2.1**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ–2.1: ನೀತಿ ಆಯೋಗದ ಮಹತ್ವಾಕಾಂಕ್ಷಿ ಜಿಲ್ಲಾ ಸೂಚ್ಯಂಕದ ಪ್ರಕಾರ ರಾಜ್ಯ ಸರಾಸರಿಗಿಂತ ಕಡಿಮೆಯಿರುವ ತಾಲ್ಲೂಕುಗಳ ಪ್ರದೇಶವಾರು ಸ್ಥಿತಿ**

| ಪ್ರದೇಶ | ತಾಲ್ಲೂಕುಗಳ ಸಂಖ್ಯೆ | ಶೇಕಡಾವಾರು |
|---|---|---|
| ಬೆಳಗಾವಿ | 19 | 25.33 |
| ಬೆಂಗಳೂರು | 17 | 22.67 |
| ಕಲ್ಯಾಣ–ಕರ್ನಾಟಕ ಪ್ರದೇಶ | 29 | 38.67 |
| ಮೈಸೂರು | 10 | 13.33 |
| **ಒಟ್ಟು ಮೊತ್ತ** | **75** | **100** |

ಆಧಾರ: ಯೋಜನಾ ಇಲಾಖೆಯ ಅವಲೋಕನ ದತ್ತಸಂಚಯ

[3] ಹುಮ್ನಾಬಾದ್, ಭಾಲ್ಕಿ, ಔರಾದ್, ಹುಲಸೂರು, ಚಿಟಗೊಪ್ಪ, ಕಮಲನಗರ ಮತ್ತು ಬಸವಕಲ್ಯಾಣ ತಾಲೂಕುಗಳು.


ಪ್ರದೇಶದ ಎರಡು ಜಿಲ್ಲೆಗಳಾದ ರಾಯಚೂರು ಮತ್ತು ಯಾದಗಿರಿಯನ್ನು ನೀತಿ ಆಯೋಗದ ಮಹತ್ವಾಕಾಂಕ್ಷೆಯ ಜಿಲ್ಲಾ ಕಾರ್ಯಕ್ರಮದಡಿಯಲ್ಲಿ ಗುರುತಿಸಲಾಗಿತ್ತು. ಆದರೆ, ಮಂಡಳಿಯು ತನ್ನ ಅಧಿಕಾರ ವ್ಯಾಪ್ತಿಯಲ್ಲಿರುವ ಈ ಎರಡು ಜಿಲ್ಲೆಗಳಲ್ಲಿ ಮಹತ್ವಾಕಾಂಕ್ಷೆಯ ಜಿಲ್ಲೆಗಳ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದ ದತ್ತಾಂಶವನ್ನು ಸಂಗ್ರಹಿಸಿ ವಿಶ್ಲೇಷಿಸಿರಲಿಲ್ಲ.

## 2.2 ಬಹು ಆಯಾಮದ ಬಡತನ ಸೂಚ್ಯಂಕವನ್ನು ಆಧರಿಸಿ ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಿತಿ

ಬಹು ಆಯಾಮದ ಬಡತನ ಸೂಚ್ಯಂಕವನ್ನು (ಎಮ್‌ಡಿಪಿಐ) ಯುನೈಟೆಡ್ ನೇಷನ್ಸ್ ಡೆವಲಪ್‌ಮೆಂಟ್ ಪ್ರೋಗ್ರಾಂ ತನ್ನ ಪ್ರಮುಖ ಮಾನವ ಅಭಿವೃದ್ಧಿ ವರದಿಯಲ್ಲಿ 2010ರಿಂದ ಬಳಸುತ್ತಿದೆ ಮತ್ತು ಇದು ವಿಶ್ವದಲ್ಲಿ ಹೆಚ್ಚು ವ್ಯಾಪಕವಾಗಿ ಪ್ರಚಲಿತದಲ್ಲಿರುವ ವಿತ್ತೀಯವಲ್ಲದ ಬಡತನ ಸೂಚ್ಯಂಕವಾಗಿದೆ. ಇದು ಆರೋಗ್ಯ, ಶಿಕ್ಷಣ ಮತ್ತು ಜೀವನಮಟ್ಟದಲ್ಲಿನ ಕಷ್ಟಾನುಭವಗಳನ್ನು ಸೆರೆಹಿಡಿಯುತ್ತದೆ. ಅದು ಕಷ್ಟಾನುಭವಗಳನ್ನು ನೇರವಾಗಿ ಅಳೆದು ಹೋಲಿಸುವುದರಿಂದ ಆದಾಯ ಬಡತನ ಮಾಪನಗಳನ್ನು ಪೂರಕಗೊಳಿಸುತ್ತದೆ. ಅದೇ ರೀತಿ, ರಾಷ್ಟ್ರೀಯ ಬಹು ಆಯಾಮದ ಬಡತನ ಸೂಚ್ಯಂಕವು ದೇಶದ 700ಕ್ಕೂ ಹೆಚ್ಚು ಜಿಲ್ಲೆಗಳಲ್ಲಿನ ಬಡತನ ಮಟ್ಟವನ್ನು ನಿರ್ಣಯಿಸಲು ಹನ್ನೆರಡು ಸೂಚಕಗಳನ್ನು ಬಳಸುತ್ತದೆ.

ಎಮ್‌ಡಿಪಿಐ ದತ್ತಾಂಶವನ್ನು ವಲಯ ನೀತಿಗಳನ್ನು ಮತ್ತು ಉದ್ದೇಶಿತ ಮಧ್ಯಸ್ಥಿಕೆಗಳನ್ನು ರೂಪಿಸಲು ಹಾಗೂ "ಯಾವ ಪ್ರದೇಶವೂ ಹಿಂದುಳಿದಿಲ್ಲ" ಎಂಬುದನ್ನು ಖಚಿತಪಡಿಸಿಕೊಳ್ಳಲು ಬಳಸಬೇಕಿತ್ತು. ರಾಷ್ಟ್ರೀಯ ಎಮ್‌ಡಿಪಿಐನ ಜಿಲ್ಲಾವಾರು ಅಂದಾಜಿನ ಪ್ರಕಾರ ನಿರ್ದಿಷ್ಟ ಸೂಚಕಗಳು ಮತ್ತು ಆಯಾಮಗಳ ಮೇಲೆ ಕೇಂದ್ರೀಕೃತ ಪ್ರಯತ್ನಗಳ ಮೂಲಕ ಮೊದಲು ದೂರದವರನ್ನು ತಲುಪಲು ಅನುಕೂಲ ಗೊಳಿಸಬೇಕು. ಆದರೆ, ಮಂಡಳಿಯು 2013–14ರಿಂದ 2020–21ರ ಅವಧಿಯಲ್ಲಿ ಯಾವುದೇ ಎಮ್‌ಡಿಪಿಐ ದತ್ತಾಂಶವನ್ನು ಸಂಗ್ರಹಿಸಿರಲಿಲ್ಲ. ರಾಜ್ಯದಲ್ಲಿನ ಕನಿಷ್ಠ ನಾಲ್ಕು ಜಿಲ್ಲೆಗಳು ಕಲ್ಯಾಣ ಕರ್ನಾಟಕ ಪ್ರದೇಶದವು ಎಂಬುದನ್ನು 2020–21ರಲ್ಲಿ ಎನ್‌ಐಟಿಐ ಆಯೋಗ ಸಿದ್ಧಪಡಿಸಿದ ಎಮ್‌ಡಿಪಿ ಸೂಚ್ಯಂಕವು ತೋರಿಸಿತು. ಉಳಿದ ಎರಡು ಜಿಲ್ಲೆಗಳೂ ಸಹ ಆರನೇ ಮತ್ತು ಒಂಬತ್ತನೇ ಸ್ಥಾನದಲ್ಲಿದ್ದವು. ಕೆಳಗಿನ **ನಕ್ಷೆ–2.2**ರಲ್ಲಿ ತೋರಿಸಿರುವಂತೆ ರಾಜ್ಯದ ಇತರ ಭಾಗಗಳಿಗೆ ಹೋಲಿಸಿದರೆ ಈ ಪ್ರದೇಶವು ಗಮನಾರ್ಹವಾಗಿ ಬಡವಾಗಿತ್ತು ಎಂಬುದನ್ನು ಇದು ಸೂಚಿಸುತ್ತದೆ:

**ನಕ್ಷೆ–2.2: ಎಮ್‌ಡಿಪಿ ಸೂಚ್ಯಂಕದ ಪ್ರಕಾರ ಜಿಲ್ಲೆಗಳ ಸ್ಥಿತಿ**




ಬಣ್ಣವು ಜಿಲ್ಲೆಯ ಬಹುಆಯಾಮದ ಬಡತನ ಸೂಚ್ಯಂಕ (ಎಮ್‌ಪಿಐ) ಅಂಕವನ್ನು ಪ್ರತಿನಿಧಿಸುತ್ತದೆ. ಎಮ್‌ಪಿಐ ಅಂಕ ಹೆಚ್ಚಾದಂತೆ ಬಣ್ಣವು ಹಸಿರು ಬಣ್ಣದಿಂದ ಹಳದಿ ಮೂಲಕ ಕೆಂಪು ಬಣ್ಣಕ್ಕೆ ಬದಲಾಗುತ್ತದೆ. ಹಸಿರು ಬಣ್ಣ ಕಡಿಮೆ

ಎಮ್‌ಪಿಐ ಅಂಕಗಳನ್ನು ಹೊಂದಿರುವ ಪ್ರದೇಶಗಳನ್ನು ಪ್ರತಿನಿಧಿಸಿದರೆ ಕೆಂಪು ಬಣ್ಣ ಹೆಚ್ಚಿನ ಎಮ್‌ಪಿಐ ಅಂಕಗಳನ್ನು ಹೊಂದಿರುವ ಪ್ರದೇಶಗಳನ್ನು ಪ್ರತಿನಿಧಿಸುತ್ತದೆ. ವ್ಯಾಖ್ಯಾನವು (ಲೆಜೆಂಡ್) ಬಣ್ಣದಿಂದ ಪ್ರತಿನಿಧಿಸುವ ಎಮ್‌ಪಿಐ ಅಂಕಗಳ ಶ್ರೇಣಿಯನ್ನು ಒದಗಿಸುತ್ತದೆ.
ಆಧಾರ: ನೀತಿ ಆಯೋಗದ ಎಮ್‌ಡಿಪಿ ವರದಿ 2021

## 2.3 ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಆಧರಿಸಿ ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಿತಿ

ಮಾನವ ಅಭಿವೃದ್ಧಿ ಸೂಚ್ಯಂಕವು (ಹೆಚ್‌ಡಿಐ) ಅಭಿವೃದ್ಧಿಯ ಮಟ್ಟವನ್ನು ಅಳೆಯಲು ಬಳಸುವ ಬಹು ಆಯಾಮದ ಸೂಚಕವಾಗಿದೆ; ಅಭಿವೃದ್ಧಿಯ ಪ್ರಮಾಣಿತ ಅಳತೆಯಾಗಿ ಕಾರ್ಯನಿರ್ವಹಿಸುವ ತಲಾ ಆದಾಯದೊಂದಿಗಿನ ಅತೃಪ್ತಿಯಿಂದ ಇದರ ಸೃಷ್ಟಿಯಾಗಿದೆ. ಒಳ್ಳೆಯ ಮತ್ತು ಕೆಟ್ಟ ಬೆಳವಣಿಗೆಯ ನಡುವಿನ ವ್ಯತ್ಯಾಸವನ್ನು ಗುರುತಿಸಲು ಮಾನವ ಅಭಿವೃದ್ಧಿಯನ್ನು ಬಳಸಲಾಗುತ್ತದೆ ಎಂದು ವಾದಿಸಲಾಗಿದೆ. ಇದು ಪ್ರದೇಶಗಳು ಮತ್ತು ಗುಂಪುಗಳಾದ್ಯಂತ ಮೂರು ಮೂಲಭೂತ ಸಾಮರ್ಥ್ಯಗಳಾದ ಆರೋಗ್ಯ, ಶಿಕ್ಷಣ ಮತ್ತು ಆದಾಯದಲ್ಲಿನ ಅಸಮಾನತೆಗಳ ಮೇಲೆ ಕೇಂದ್ರೀಕರಿಸುತ್ತದೆ.

ಕಲ್ಯಾಣ-ಕರ್ನಾಟಕ ಪ್ರದೇಶದಲ್ಲಿ ಕಾಲಕಾಲಕ್ಕೆ ಎಚ್‌ಡಿಐಗೆ ಸಂಬಂಧಿಸಿದ ಅಂಕಿಅಂಶಗಳನ್ನು ಮೇಲ್ವಿಚಾರಣೆ ಮಾಡಲು ಮಂಡಳಿಯು ಯಾವುದೇ ಕಾರ್ಯವಿಧಾನವನ್ನು ರೂಪಿಸಿರಲಿಲ್ಲ ಎಂಬುದನ್ನು ಗಮನಿಸಲಾಯಿತು.

### *2.3.1 ತಲಾ ಆದಾಯ*

ಯುಎನ್‌ಡಿಪಿ ಅಭಿವೃದ್ಧಿಪಡಿಸಿದ ಮಾನವ ಅಭಿವೃದ್ಧಿ ಸೂಚ್ಯಂಕದ ಮೂರು ಸೂಚಕಗಳಲ್ಲಿ ತಲಾ ಆದಾಯ (ಪಿಸಿಐ) ಒಂದು ಸೂಚಕವಾಗಿದೆ. ಲೆಕ್ಕಪರಿಶೋಧನೆಯು 2013–14 ಮತ್ತು 2019–20ರ ಅವಧಿಯಲ್ಲಿ ಜಿಲ್ಲೆಗಳು ಮತ್ತು ರಾಜ್ಯದ ತಲಾ ಆದಾಯದ ನಡುವಿನ ವ್ಯತ್ಯಾಸವನ್ನು ವಿಶ್ಲೇಷಿಸಿತು ಮತ್ತು ಫಲಿತಾಂಶಗಳನ್ನು ಕೆಳಗೆ ನೀಡಲಾಗಿದೆ:

2013–14ರಿಂದ 2019–20ರ ಅವಧಿಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದ 6 ಜಿಲ್ಲೆಗಳ ತಲಾ ಆದಾಯವನ್ನು ಕೆಳಗಿನ **ಕೋಷ್ಟಕ-2.2** ರಲ್ಲಿ ನೀಡಲಾಗಿದೆ.


**ಕೋಷ್ಟಕ-2.2 ತಲಾ ಆದಾಯ (ಪಿಸಿಐ)**

| ಜಿಲ್ಲೆಗಳು | ಹಣಕಾಸು ವರ್ಷ | | | | | | | ತಲಾ ಆದಾಯದ ಬೆಳವಣಿಗೆ |
|---|---|---|---|---|---|---|---|---|
| | 2013–14 | 2014–15 | 2015–16 | 2016–17 | 2017–18 | 2018–19 | 2019–20 | |
| ಬಳ್ಳಾರಿ | 1,08,454 | 1,14,138 | 1,16,897 | 1,34,150 | 1,50,319 | 1,61,715 | 1,73,529 | 60.00 |
| ಬೀದರ್ | 70,543 | 70,339 | 73,892 | 85,713 | 98,754 | 1,00,234 | 1,11,750 | 58.41 |
| ಕಲಬುರಗಿ | 67,886 | 71,085 | 65,493 | 83,619 | 92,098 | 99,322 | 1,00,446 | 47.96 |
| ಕೊಪ್ಪಳ | 73,916 | 75,598 | 74,134 | 82,787 | 96,036 | 1,00,497 | 1,10,886 | 50.02 |
| ರಾಯಚೂರು | 73,851 | 76,498 | 78,057 | 90,530 | 95,451 | 1,05,654 | 1,16,389 | 57.60 |
| ಯಾದಗಿರಿ | 69,014 | 69,177 | 68,928 | 81,845 | 1,03,677 | 97,353 | 1,12,937 | 63.64 |
| **ರಾಜ್ಯ** | 1,26,976 | 1,32,880 | 1,42,267 | 1,61,912 | 1,88,765 | 2,05,697 | 2,22,002 | 74.84 |

(ಆಧಾರ: ಕರ್ನಾಟಕದ ಆರ್ಥಿಕ ಸಮೀಕ್ಷೆ)


ಈ ಅವಧಿಯಲ್ಲಿ ಕಲ್ಯಾಣ-ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳ ಪಿಸಿಐ ಬೆಳವಣಿಗೆಯು ರಾಜ್ಯವಾರು ಬೆಳವಣಿಗೆಗಿಂತ ಗಮನಾರ್ಹವಾಗಿ ಕಡಿಮೆಯಾಗಿದ್ದಿತು. ಕಲ್ಯಾಣ-ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳ ಪಿಸಿಐ ಬೆಳವಣಿಗೆಯ ರಾಜ್ಯದ ಜೊತೆಗಿನ ಹೋಲಿಕೆಯನ್ನು **ಕೆಳಗಿನ ನಕ್ಷೆ-2.3**ರಲ್ಲಿ ನೀಡಲಾಗಿದೆ:

**ನಕ್ಷೆ–2.3 ತಲಾ ಆದಾಯದ ಹೋಲಿಕೆ**




ಕಲ್ಯಾಣ–ಕರ್ನಾಟಕ ಪ್ರದೇಶದಲ್ಲಿನ ಆರು ಜಿಲ್ಲೆಗಳ ಪಿಸಿಐನಲ್ಲಿನ ನಿಧಾನಗತಿಯ ಬೆಳವಣಿಗೆಯು ಕೆಳಗಿನ **ನಕ್ಷೆ–2.4** ರಲ್ಲಿ ತೋರಿಸಿರುವಂತೆ ರಾಜ್ಯ ಪಿಸಿಐನೊಂದಿಗೆ ವ್ಯತ್ಯಾಸವನ್ನು ಹೆಚ್ಚಿಸಿದ್ದಿತು:

**ನಕ್ಷೆ–2.4: ರಾಜ್ಯ ಪಿಸಿಐ ಜೊತೆಗೆ ಕಲ್ಯಾಣ–ಕರ್ನಾಟಕ ಜಿಲ್ಲೆಗಳ ಪಿಸಿಐ ವಿಭೇದ**




ಆಧಾರ: ಕರ್ನಾಟಕದ ಆರ್ಥಿಕ ಸಮೀಕ್ಷೆ

ಮಂಡಳಿಯು ಈ ವಿಷಯದಲ್ಲಿ ಯಾವುದೇ ಅಧ್ಯಯನಗಳನ್ನು ನಡೆಸಿರಲಿಲ್ಲ ಮತ್ತು ಈ ಅವಧಿಯಲ್ಲಿ ಯಾವುದೇ ಕಾರ್ಯಕ್ರಮಗಳನ್ನು ಕೈಗೊಂಡಿರಲಿಲ್ಲ.

## 2.4 ಡಾ.ನಂಜುಂಡಪ್ಪ ಸಮಿತಿಯ ಸೂಚಕಗಳ ಚೌಕಟ್ಟಿನ ಆಧಾರದ ಮೇಲೆ ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಿತಿ

ಡಾ.ನಂಜುಂಡಪ್ಪ ಸಮಿತಿಯ ವರದಿಯು ಅಭಿವೃದ್ಧಿಯ ಸೂಚಕಗಳು ಮತ್ತು ಕ್ಷೇತ್ರಗಳನ್ನು ಗುರುತಿಸಿ 175 ತಾಲ್ಲೂಕುಗಳಲ್ಲಿ 2002ರಲ್ಲಿ ಅಸ್ತಿತ್ವದಲ್ಲಿದ್ದ ಪ್ರಾದೇಶಿಕ ಅಸಮಾನತೆಗಳನ್ನು ಪ್ರಮಾಣೀಕರಿಸಿತ್ತು. ಗುರುತಿಸಲಾದ 35 ಸಾಮಾಜಿಕ–ಆರ್ಥಿಕ ಸೂಚಕಗಳ ಆಧಾರದ ಮೇಲೆ ಅಭಿವೃದ್ಧಿಪಡಿಸಿದ ಸಮಗ್ರ

ಸಂಯೋಜಿತ ಅಭಿವೃದ್ಧಿ ಸೂಚ್ಯಂಕದ (ಸಿಸಿಡಿಐ) ಪ್ರಕಾರ ಪ್ರದೇಶಗಳ ಹಿಂದುಳಿದಿರುವಿಕೆಯನ್ನು ನಿರ್ಣಯಿಸಲಾಗಿತ್ತು. ಸಮಿತಿಯು ರಾಜ್ಯದಲ್ಲಿ 114 ತಾಲೂಕುಗಳನ್ನು ಹಿಂದುಳಿದವೆಂದು ಗುರುತಿಸಿತ್ತು. ಅವುಗಳನ್ನು ಹಿಂದುಳಿದ (35), ಹೆಚ್ಚು ಹಿಂದುಳಿದ (40) ಮತ್ತು ಅತ್ಯಂತ ಹಿಂದುಳಿದ (39) ತಾಲ್ಲೂಕುಗಳೆಂದು ಮತ್ತೂ ವರ್ಗೀಕರಿಸಲಾಗಿತ್ತು. 2002ರ ಅವಧಿಯಲ್ಲಿ ರಾಜ್ಯದಲ್ಲಿನ ಈ 39 ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ 21 ತಾಲ್ಲೂಕುಗಳು ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸೇರಿದವುಗಳಾಗಿದ್ದವು ಮತ್ತು ಇದು ಹೈದರಾಬಾದ್ ಕರ್ನಾಟಕ ಪ್ರದೇಶದ ಹಿಂದುಳಿದಿರುವಿಕೆಯನ್ನು ಸೂಚಿಸುತ್ತದೆ.

ಕರ್ನಾಟಕ ಸರ್ಕಾರದ ಯೋಜನಾ ಇಲಾಖೆಯಿಂದ 2019–20ರ ಅವಧಿಗೆ ಡಾ.ನಂಜುಂಡಪ್ಪ ಸಮಿತಿಯ 35 ಸಾಮಾಜಿಕ–ಆರ್ಥಿಕ ಸೂಚಕಗಳಿಗೆ ಲೆಕ್ಕಪರಿಶೋಧನೆಯು ದತ್ತಾಂಶವನ್ನು ಸಂಗ್ರಹಿಸಿತು. 2019–20ನೇ ಅವಧಿಯ ಡಾ.ನಂಜುಂಡಪ್ಪ ಸಮಿತಿಯ ಸೂಚಕಗಳು ಮತ್ತು ವಿಧಾನಗಳ ಆಧಾರದ ಮೇಲೆ ಲೆಕ್ಕಪರಿಶೋಧನೆಯು ದತ್ತಾಂಶದ ಮರು ಲೆಕ್ಕಾಚಾರ ಮಾಡಿತು. ಮರು ಲೆಕ್ಕಹಾಕಿದ ಅಂಕಿಅಂಶಗಳು ರಾಜ್ಯದಲ್ಲಿ 53 ತಾಲ್ಲೂಕುಗಳನ್ನು ಹಿಂದುಳಿದ, 56 ತಾಲ್ಲೂಕುಗಳನ್ನು ಹೆಚ್ಚು ಹಿಂದುಳಿದ ಮತ್ತು 38 ತಾಲ್ಲೂಕುಗಳನ್ನು ಅತ್ಯಂತ ಹಿಂದುಳಿದವುಗಳೆಂದು ತೋರಿಸಿತು. ಅತ್ಯಂತ ಹಿಂದುಳಿದ 38ರಲ್ಲಿ 21 ತಾಲ್ಲೂಕುಗಳು ಕಲ್ಯಾಣ ಕರ್ನಾಟಕ ಪ್ರದೇಶದವುಗಳಾಗಿದ್ದು ಈ ಪ್ರದೇಶದಲ್ಲಿ ಹಿಂದುಳಿದಿರುವಿಕೆಯ ಮುಂದುವರಿದ ಪ್ರಾಬಲ್ಯವನ್ನು ಸೂಚಿಸುತ್ತದೆ.

ಡಾ.ನಂಜುಂಡಪ್ಪ ಸೂಚ್ಯಂಕಗಳ ಆಧಾರದ ಮೇಲೆ 2002 ಮತ್ತು 2020ರ ಅವಧಿಯಲ್ಲಿ ರಾಜ್ಯದಲ್ಲಿನ ತಾಲ್ಲೂಕುಗಳ ವರ್ಗೀಕರಣವನ್ನು ಕೆಳಗಿನ **ಕೋಷ್ಟಕ–2.3** ರಲ್ಲಿ ನೀಡಲಾಗಿದೆ:

**ಕೋಷ್ಟಕ–2.3: ಡಾ.ನಂಜುಂಡಪ್ಪ ವರದಿಯ ಪ್ರಕಾರ ತಾಲ್ಲೂಕುಗಳ ಸ್ಥಿತಿ**

| ವರ್ಗೀಕರಣ | (ಸೂಚ್ಯಂಕ 2002) | | (ಸೂಚ್ಯಂಕ 2019–20) | |
|---|---|---|---|---|
| | ರಾಜ್ಯದಲ್ಲಿನ ತಾಲ್ಲೂಕುಗಳ ಸಂಖ್ಯೆ | ಕಲ್ಯಾಣ–ಕರ್ನಾಟಕ ಪ್ರದೇಶದಲ್ಲಿನ ತಾಲ್ಲೂಕಗಳ ಸಂಖ್ಯೆ | ರಾಜ್ಯದಲ್ಲಿನ ತಾಲ್ಲೂಕುಗಳ ಸಂಖ್ಯೆ | ಕಲ್ಯಾಣ–ಕರ್ನಾಟಕ ಪ್ರದೇಶದಲ್ಲಿನ ತಾಲ್ಲೂಕಗಳ ಸಂಖ್ಯೆ |
| ಸ್ವಲ್ಪಮಟ್ಟಿಗೆ ಅಭಿವೃದ್ಧಿಯಾಗಿರುವವು | 61 | 3 | 80 | 7 |
| ಹಿಂದುಳಿದಿರುವವು | 35 | 2 | 53 | 7 |
| ಹೆಚ್ಚು ಹಿಂದುಳಿದಿರುವವು | 40 | 5 | 56 | 15 |
| ಅತ್ಯಂತ ಹಿಂದುಳಿದಿರುವವು | 39 | 21 | 38 | 21 |
| **ಒಟ್ಟು** | **175** | **31** | **227** | **50** |

ಆಧಾರ: ಡಾ.ನಂಜುಂಡಪ್ಪ ವರದಿ (2002) ಮತ್ತು ಅಂಕಿಅಂಶಗಳ ಇಲಾಖೆಯು ಒದಗಿಸಿದ ದತ್ತಾಂಶ

## 2.5 ರಾತ್ರಿ ಬೆಳಕಿನ ಪ್ರಕಾಶಮಾನತೆಯ ದತ್ತಾಂಶದ ಆಧಾರದ ಮೇಲೆ ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಿತಿ

ವಿದ್ಯುತ್ ಪೂರೈಕೆಯ ವಿಸ್ತರಣೆ, ಜನಸಂಖ್ಯೆಯ ಭೌಗೋಳಿಕ ವಿತರಣೆ ಮತ್ತು ಆರ್ಥಿಕ ಚಟುವಟಿಕೆ, ನಗರ ವಿಸ್ತರಣೆ ಮತ್ತು ನಗರ ಕೇಂದ್ರಗಳ ನಡುವಿನ ಬೆಳವಣಿಗೆಗಳ ಪ್ರಾತಿನಿಧ್ಯವನ್ನು ರಾತ್ರಿ–ಸಮಯದ ಪ್ರಕಾಶಮಾನತೆಯು ಒದಗಿಸುತ್ತದೆ. ಜಿಯೋಸ್ಪೇಷಿಯಲ್ ತಂತ್ರಗಳು ದೇಶದಲ್ಲಿ ಭೌತಿಕ ಮತ್ತು ಆರ್ಥಿಕ ಮೂಲಸೌಕರ್ಯ ಅಭಿವೃದ್ಧಿಯ ವ್ಯಾಪ್ತಿಯನ್ನು, ಅಂದರೆ ರಾಷ್ಟ್ರೀಯ ಹೆದ್ದಾರಿಗಳು, ವಿಮಾನ ನಿಲ್ದಾಣಗಳು, ರಸ್ತೆ ಜಾಲ, ಮೆಟ್ರೋಗಳು ಇತ್ಯಾದಿಗಳ ವಿಸ್ತರಣೆ ನಿರ್ಣಯಿಸಲು ಸಹಾಯ ಮಾಡುತ್ತವೆ. 2021–22ರ ದೇಶದಲ್ಲಿ ದೀರ್ಘಾವಧಿಯ ಬೆಳವಣಿಗೆಗಳನ್ನು ಹೋಲಿಕೆ ಮಾಡಲು, ಪ್ರತಿನಿಧಿಸಲು ಮತ್ತು ಅನುಸರಿಸಲು ಆರ್ಥಿಕ ಸಮೀಕ್ಷೆಯು ಜಿಯೋ–ಸ್ಪೇಶಿಯಲ್ ದತ್ತಾಂಶ ತಂತ್ರಗಳನ್ನು ಬಳಸಿತ್ತು.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯಲ್ಲಿರುವ (ಇಸ್ರೋ) ಪ್ರಾದೇಶಿಕ ದೂರ ಸಂವೇದಿ ಕೇಂದ್ರದ (ಆರ್‌ಆರ್‌ಎಸ್‌ಸಿ) ಸೇವೆಗಳನ್ನು ಬಳಸಿಕೊಂಡು 2015 ಮತ್ತು 2020ರ ಅವಧಿಯಲ್ಲಿ ರಾತ್ರಿ ಬೆಳಕಿನ ಪ್ರಕಾಶಮಾನತೆಯನ್ನು ಬಳಸಿಕೊಂಡು ರಾತ್ರಿ ಬೆಳಕಿನ ಜಿಯೋಸ್ಪೇಷಿಯಲ್ ವಿತರಣೆಯನ್ನು ಅಧ್ಯಯನ ಮಾಡುವ ಮೂಲಕ ಕಲ್ಯಾಣ ಕರ್ನಾಟಕ ಪ್ರದೇಶದ ಪ್ರಾದೇಶಿಕ ಬೆಳವಣಿಗೆಯನ್ನು ಲೆಕ್ಕಪರಿಶೋಧನೆಯು ವಿಶ್ಲೇಷಿಸಿತು. ಇಸ್ರೋದಲ್ಲಿನ ಆರ್‌ಆರ್‌ಎಸ್‌ಸಿಯು ಕಲ್ಯಾಣ ಕರ್ನಾಟಕ ಜಿಲ್ಲೆಗಳ ನಗರ ಬೆಳವಣಿಗೆಯನ್ನು ರಾಜ್ಯದ ಇತರ ಜಿಲ್ಲೆಗಳೊಂದಿಗೆ ಹೋಲಿಸಲು ಹೊಸ ಜಾಗತಿಕ ನೋಟ ಮತ್ತು ಭೂಮಿಯ ಸಿಟಿ ಲೈಟ್‌ಗಳ ಅನಿಮೇಷನ್ ಅನ್ನು ಬಳಸಿಕೊಂಡು ಜಿಯೋಸ್ಪೇಷಿಯಲ್ ದತ್ತಾಂಶದ ಮೂಲಕ ಅಧ್ಯಯನವನ್ನು ನಡೆಸಿತು. ಗೂಗಲ್ ಅರ್ಥ್ ಎಂಜಿನ್‌ನಿಂದ 2015 ಮತ್ತು 2020ರ ಅವಧಿಯ ದತ್ತಾಂಶವನ್ನು ಪಡೆದುಕೊಳ್ಳಲಾಯಿತು. 2015–2020ರ ಅವಧಿಗೆ ಇತರ ಪ್ರದೇಶಗಳಿಗೆ ಹೋಲಿಸಿದರೆ ಕಲಬುರಗಿ ಪ್ರದೇಶವು ಕಡಿಮೆ ಬೆಳವಣಿಗೆಯನ್ನು ತೋರಿಸಿದೆ ಎಂದು ಅಧ್ಯಯನದ ಫಲಿತಾಂಶಗಳು ಸ್ಪಷ್ಟವಾಗಿ ಸೂಚಿಸಿದವು. ಇತರ ಪ್ರದೇಶಗಳಿಗೆ ಹೋಲಿಸಿದರೆ ಕಲ್ಯಾಣ ಕರ್ನಾಟಕ ಪ್ರದೇಶದ ಪ್ರಕಾಶಮಾನ ಮೌಲ್ಯದಲ್ಲಿ ಒಟ್ಟಾರೆ ಹೆಚ್ಚಳದಲ್ಲಿ ಕಡಿಮೆಯಿರುವುದನ್ನು ಫಲಿತಾಂಶಗಳು ತೋರಿಸಿದವು. 2015ರಿಂದ 2020ರ ಅವಧಿಯಲ್ಲಿ ರಾಜ್ಯದಲ್ಲಿ ಪ್ರಕಾಶಮಾನದ ಹೆಚ್ಚಳವು ಶೇಕಡಾ 19ರಷ್ಟಿದ್ದರೆ, ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಪ್ರಕಾಶಮಾನದ ಹೆಚ್ಚಳವು ಕೇವಲ ಶೇಕಡಾ 14.20ರಷ್ಟಿತ್ತು.


ರಾಜ್ಯದ ಪ್ರಕಾಶಮಾನದಲ್ಲಿನ ಪ್ರದೇಶವಾರು ಬೆಳವಣಿಗೆಯನ್ನು ಕೆಳಗಿನ **ಕೋಷ್ಟಕ–2.4**ರಲ್ಲಿ ನೀಡಲಾಗಿದೆ:

**ಕೋಷ್ಟಕ–2.4: ಪ್ರಕಾಶಮಾನತೆಯಲ್ಲಿ ಪ್ರದೇಶವಾರು ಬೆಳವಣಿಗೆ**


| ಪ್ರದೇಶ | ಪ್ರಕಾಶಮಾನತೆಯಲ್ಲಿ ಬೆಳವಣಿಗೆ (ಶೇಕಡಾವಾರು) |
|---|---|
| ಮೈಸೂರು | 17.75 |
| ಬೆಂಗಳೂರು | 21.95 |
| ಬೆಳಗಾವಿ | 21.63 |
| ಕಲ್ಯಾಣ–ಕರ್ನಾಟಕ | 14.20 |
| **ಒಟ್ಟು ರಾಜ್ಯ** | **19** |

2015 ಮತ್ತು 2020ರ ಅವಧಿಯಲ್ಲಿ ಇತರ ಪ್ರದೇಶಗಳಿಗೆ ಸಂಬಂಧಿಸಿದಂತೆ ಕಲ್ಯಾಣ–ಕರ್ನಾಟಕ ಪ್ರದೇಶದ ಸ್ಥಿತಿಯನ್ನು ಕೆಳಗಿನ ನಕ್ಷೆಗಳಲ್ಲಿ ತೋರಿಸಲಾಗಿದೆ.


**ನಕ್ಷೆ–2.5: ರಾಜ್ಯದ ಪ್ರಕಾಶಮಾನತೆಯಲ್ಲಿ ಬೆಳವಣಿಗೆ**



**ನಕ್ಷೆ–2.6: ಕಲ್ಯಾಣ–ಕರ್ನಾಟಕ ಪ್ರದೇಶದ ಪ್ರಕಾಶಮಾನತೆಯಲ್ಲಿ ಬೆಳವಣಿಗೆ**




**ನಕ್ಷೆ–2.7: ಬೆಂಗಳೂರು ಪ್ರದೇಶದ ಪ್ರಕಾಶಮಾನತೆಯಲ್ಲಿ ಬೆಳವಣಿಗೆ**




## 2.6 ಸ್ಥಿರ ಅಭಿವೃದ್ಧಿ ಗುರಿಗಳ ಸೂಚಕ ಚೌಕಟ್ಟು

ಜಾಗತಿಕ ಗುರಿಗಳು ಎಂದೂ ಕರೆಯಲ್ಪಡುವ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (ಎಸ್‌ಡಿಜಿಗಳು) ವಿಶ್ವಸಂಸ್ಥೆಯು 2015ರಲ್ಲಿ ಬಡತನವನ್ನು ಕೊನೆಗೊಳಿಸಲು, ಭೂಮಿಯನ್ನು ರಕ್ಷಿಸಲು ಮತ್ತು 2030ರ ವೇಳೆಗೆ ಎಲ್ಲಾ ಜನರು ಶಾಂತಿ ಮತ್ತು ಸಮೃದ್ಧಿಯನ್ನು ಹೊಂದಿರುತ್ತಾರೆ ಎಂಬುದನ್ನು ಖಚಿತ ಪಡಿಸಿಕೊಳ್ಳಲು ಸಾರ್ವತ್ರಿಕ ಕರೆಯನ್ನಾಗಿ ಅಳವಡಿಸಿಕೊಂಡಿದೆ. ವಿಶ್ವದಾದ್ಯಂತ ನೀತಿ ನಿರೂಪಕರು ಮತ್ತು ಅನುಷ್ಠಾನಕಾರರು ಪರಿಣಾಮಕಾರಿ ಮತ್ತು ಸಮಯೋಚಿತ ನೀತಿಗಳು ಮತ್ತು ಉಪಕ್ರಮಗಳನ್ನು ವಿನ್ಯಾಸಗೊಳಿಸಲು ಅನುವು ಮಾಡಿಕೊಡುವುದಕ್ಕಾಗಿ ಎಸ್‌ಡಿಜಿಗಳನ್ನು ಸಾಮಾಜಿಕ, ಆರ್ಥಿಕ ಮತ್ತು ಪರಿಸರದ ವಿಷಯಗಳನ್ನು 17 ಉದ್ದೇಶಗಳು ಮತ್ತು 169 ಗುರಿಗಳಾಗಿ ವಿಭಜಿಸಿವೆ. ಜಿಲ್ಲಾ (ಉಪ–ರಾಜ್ಯ) ಮತ್ತು ಸ್ಥಳೀಯ ಹಂತಗಳಲ್ಲಿ, ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು, ಜಿಲ್ಲಾಡಳಿತ ಮತ್ತು ಮುಂಚೂಣಿಯ ಕಾರ್ಯಕರ್ತರು ಎಸ್‌ಡಿಜಿಗಳ ಮೇಲಿನ ಕ್ರಮಕ್ಕೆ ಪ್ರಮುಖರಾಗಿದ್ದರು. ಅಜೆಂಡಾ 2030ರಲ್ಲಿ ನಿಗದಿಪಡಿಸಿದ ಗುರಿಗಳನ್ನು ತಲುಪಲು ಎಸ್‌ಡಿಜಿಗಳ ಬಗ್ಗೆ ಎಲ್ಲಾ ಪಾಲುದಾರರಲ್ಲಿ ಅರಿವು ಮೂಡಿಸುವುದು ನಿರ್ಣಾಯಕವಾಗಿದೆ. ಇದು ಪರಿಣಾಮಕಾರಿ

ಸ್ಥಳೀಕರಣ ಮತ್ತು ಉತ್ತಮ ಮಾಲೀಕತ್ವವನ್ನು ಖಚಿತಪಡಿಸುವುದಲ್ಲದೇ ಆಂತರಿಕ ಮತ್ತು ಸುಸ್ಥಿರ ಅಭಿವೃದ್ಧಿಗೆ ಅಗತ್ಯವಾಗಿರುವ ವರ್ತನೆಯ ಬದಲಾವಣೆಗೆ ಸಹಾಯ ಮಾಡುತ್ತದೆ.

ಪ್ರಾದೇಶಿಕ ಅಭಿವೃದ್ಧಿಯನ್ನು ಸಾಧಿಸಲು ಎಸ್‌ಡಿಜಿಗಳನ್ನು ರೂಪಿಸುವ ಹೆಚ್ಚಿನ ಸಾಮಾಜಿಕ–ಆರ್ಥಿಕ ವಲಯಗಳನ್ನು ತಲುಪಿಸಲು ಮಂಡಳಿಗೆ 371–ಜೆ ಅಡಿಯಲ್ಲಿ ಅಧಿಕಾರವಿದೆ. ಆದ್ದರಿಂದ ಮಂಡಳಿಯ ನೀತಿ ಮತ್ತು ಕಾರ್ಯತಂತ್ರವನ್ನು ಎಸ್‌ಡಿಜಿಗಳಿಗೆ ಜೋಡಿಸುವುದು ಅತ್ಯಗತ್ಯವಾಗಿದೆ. ಅಂತರವನ್ನು ಗುರುತಿಸಲು ಮತ್ತು ಅಂತರವನ್ನು ಪೂರಕಗೊಳಿಸಲು ಮಂಡಳಿಯ ಪ್ರಯತ್ನಗಳೊಂದಿಗೆ ಅಸ್ತಿತ್ವದಲ್ಲಿರುವ ಸರ್ಕಾರದ ಯೋಜನೆಗಳನ್ನು ಎಸ್‌ಡಿಜಿಗಳೊಂದಿಗೆ ಮ್ಯಾಪಿಂಗ್ ಮಾಡಬೇಕಿತ್ತು.

ಆದರೆ ರಾಜ್ಯ ಸರ್ಕಾರ/ಮಂಡಳಿಯು ಕಲ್ಯಾಣ–ಕರ್ನಾಟಕ ಪ್ರದೇಶದಲ್ಲಿ ಎಸ್‌ಡಿಜಿಗಳ ಸಾಧನೆಗಾಗಿ ಯಾವುದೇ ಕಾರ್ಯತಂತ್ರವನ್ನು ಅಭಿವೃದ್ಧಿಪಡಿಸಿರಲಿಲ್ಲ ಎಂಬುದನ್ನು ಗಮನಿಸಲಾಗಿಯಿತು. ಮಂಡಳಿಯು ಡಾ.ನಂಜುಂಡಪ್ಪ ಸಮಿತಿಯ ಸೂಚಕಗಳು ಅಥವಾ ಎಸ್‌ಡಿಜಿ ಸೂಚಕಗಳ ಜೊತೆಗೆ ವಿವಿಧ ಹಿಂದುಳಿದ ಸೂಚಕಗಳ ದತ್ತಾಂಶವನ್ನು ನಿಯತಕಾಲಿಕವಾಗಿ ಸಂಗ್ರಹಿಸಿರಲಿಲ್ಲ ಮತ್ತು ವಿಶ್ಲೇಷಿಸಿರಲಿಲ್ಲ.

ಭಾರತ ಸರ್ಕಾರವು ರಾಷ್ಟ್ರೀಯ ಎಸ್‌ಡಿಜಿ ಇಂಡಿಕೇಟರ್ ಫ್ರೇಮ್‌ವರ್ಕ್‌ಅನ್ನು (ಎನ್‌ಐಎಫ್) ಅಭಿವೃದ್ಧಿಪಡಿಸಿತ್ತು ಮತ್ತು ದತ್ತಾಂಶ ಸಂಗ್ರಹಣೆಗಾಗಿ ದತ್ತಾಂಶ–ಮೂಲಗಳನ್ನು ಗುರುತಿಸಿತ್ತು. ಮಂಡಳಿಯು ಈ ರಾಷ್ಟ್ರೀಯ ಎಸ್‌ಡಿಜಿ ಸೂಚಕ ಚೌಕಟ್ಟನ್ನು ದತ್ತಾಂಶ ಸಂಗ್ರಹಣೆಗಾಗಿ ಮತ್ತು ಪ್ರದೇಶದಲ್ಲಿ ಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯ ಪ್ರಗತಿಯ ಮೇಲ್ವಿಚಾರಣೆಗಾಗಿ ಬಳಸಿಕೊಂಡಿರಲಿಲ್ಲ.

ಅಲ್ಲದೆ, ಜಿಲ್ಲೆಗಳು ಮತ್ತು ತಾಲೂಕುಗಳಂತಹ ಉಪ–ಪ್ರದೇಶಗಳ ನಡುವೆ ಸ್ಪರ್ಧೆಯ ಮನೋಭಾವವನ್ನು ಹೆಚ್ಚಿಸಲು, ಜಿಲ್ಲೆಗಳು ಮತ್ತು ತಾಲೂಕುಗಳ ಮೂಲಕ ವಿಂಗಡಣೆಯಾದ ಪ್ರಗತಿಯನ್ನು ಅಳೆಯಲು ವೈಯಕ್ತಿಕ ಗುರಿಗಳಲ್ಲಿ ಮತ್ತು ಅಭಿವೃದ್ಧಿಯ ಎಲ್ಲಾ ಆಯಾಮಗಳ ಸಂಯೋಜಿತ ಎಸ್‌ಡಿಜಿ ಸೂಚ್ಯಂಕವನ್ನು ತಯಾರಿಸುವ ಅಗತ್ಯವಿದೆ.

ಮಂಡಳಿಯು ಕಾಲಕಾಲಕ್ಕೆ ಎಸ್‌ಡಿಜಿ ಸೂಚಕಗಳಲ್ಲಿ ಜಿಲ್ಲೆಗಳು/ತಾಲುಕುಗಳ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಯಾವುದೇ ಸಂಯೋಜಿತ ಸೂಚ್ಯಂಕವನ್ನು ಅಳವಡಿಸಿಕೊಳ್ಳಲು ಪ್ರಯತ್ನ ಮಾಡಿರಲಿಲ್ಲ.

ಪರಿಸರ ಎಸ್‌ಡಿಜಿಗಳು ಪರಿಸರ ಸ್ನೇಹಿ ಆರ್ಥಿಕ ಚಟುವಟಿಕೆಗಳಾದ ಗಾಳಿಶಕ್ತಿ ಉತ್ಪಾದನೆ, ಪರಿಸರ ಪ್ರವಾಸೋದ್ಯಮ ಇತ್ಯಾದಿಗಳನ್ನು ಅನ್ವೇಷಿಸಲು ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಅವಕಾಶಗಳನ್ನು ನೀಡುತ್ತವೆ. ಆದರೂ, ಮಂಡಳಿಯು ಪರಿಸರ ಎಸ್‌ಡಿಜಿಗಳನ್ನು ಸಾಧಿಸುವ ಕ್ಷೇತ್ರಗಳಲ್ಲಿ ಮಧ್ಯಸ್ಥಿಕೆಗಳನ್ನು ಅನ್ವೇಷಿಸಲಿಲ್ಲ.

## 2.7 ನೈಸರ್ಗಿಕ ಸಂಪನ್ಮೂಲ ಲೆಕ್ಕಪತ್ರ ನಿರ್ವಹಣೆ (ಎನ್‌ಆರ್‌ಎ)

ನೈಸರ್ಗಿಕ ಸಂಪನ್ಮೂಲ ಲೆಕ್ಕಪತ್ರ ನಿರ್ವಹಣೆಯು (ಎನ್‌ಆರ್‌ಎ), ನೈಸರ್ಗಿಕ ಸಂಪನ್ಮೂಲಗಳಿಗೆ ಸಂಬಂಧಿಸಿದ ದತ್ತಾಂಶವನ್ನು ಸಂಕಲನ ಮಾಡುವ ಲೆಕ್ಕಪರಿಶೋಧಕ ಚೌಕಟ್ಟಾಗಿದೆ ಮತ್ತು ಸುಸ್ಥಿರ ಅಭಿವೃದ್ಧಿ ಗುರಿ, 2030 ಅನ್ನು (ಎಸ್‌ಡಿಜಿ) ಸಾಧಿಸಲು ಭಾರತವನ್ನು ಸಿದ್ಧಪಡಿಸುವ ಒಂದು ಮಾರ್ಗವಾಗಿದೆ. ನೈಸರ್ಗಿಕ ಸಂಪನ್ಮೂಲಗಳ ಮತ್ತಷ್ಟು ಬಳಕೆಯ ಬಗ್ಗೆ ಮಾತ್ರವಲ್ಲದೆ ಭವಿಷ್ಯದ ಪೀಳಿಗೆಗೆ ಈ ಸಂಪನ್ಮೂಲಗಳ ಸಮರ್ಥನೀಯತೆಯನ್ನು ಖಚಿತಪಡಿಸಿಕೊಳ್ಳಲು ನಿರ್ಧಾರಗಳನ್ನು ತೆಗೆದುಕೊಳ್ಳಲು ಎನ್‌ಆರ್‌ಎ ಸಹಾಯ ಮಾಡುತ್ತದೆ.

ಸುಸ್ಥಿರ ಅಭಿವೃದ್ಧಿಯ ಅತ್ಯಂತ ನಿರ್ಣಾಯಕ ಅಂಶವೆಂದರೆ ಅದು ಸಂಪನ್ಮೂಲಗಳ ರೂಪುರೇಶೆಯನ್ನು ಒದಗಿಸುತ್ತದೆ, ಅವುಗಳ ಸುಸ್ಥಿರತೆಯ ಮೇಲೆ ಗಮನವಿಡುವ ಬಳಕೆಯ ವೇಗ ಮತ್ತು ಆರ್ಥಿಕ ಸೂಚ್ಯಂಕಗಳಲ್ಲಿ ಪರಿಸರದ ಅಂಶಗಳನ್ನು ಸೇರಿಸುತ್ತದೆ. 17ರಲ್ಲಿ ನಾಲ್ಕು ಗುರಿಗಳು ನೇರವಾಗಿ ನೈಸರ್ಗಿಕ ಸಂಪನ್ಮೂಲ ಲೆಕ್ಕಪತ್ರ ನಿರ್ವಹಣೆ ಮತ್ತು ಈ ಸಂಪನ್ಮೂಲಗಳ ಸಮರ್ಥನೀಯತೆಗೆ ಸಂಬಂಧಿಸಿವೆ.

ಕಲ್ಯಾಣ–ಕರ್ನಾಟಕ ಪ್ರದೇಶದಲ್ಲಿ ಸುಣ್ಣದ ಕಲ್ಲು, ಜಿಪ್ಸಮ್, ಸ್ಫಟಿಕ ಶಿಲೆ, ಬಾಕ್ಸೈಟ್, ಕಾಯೋಲಿನ್, ರೆಡ್ ಓಚರ್, ಬಿಳಿ ಸ್ಫಟಿಕ ಶಿಲೆ, ಕಬ್ಬಿಣದ ಅದಿರು, ಮ್ಯಾಂಗನೀಸ್ ಮುಂತಾದ ಶ್ರೀಮಂತ ಖನಿಜ ಸಂಪನ್ಮೂಲಗಳು ಸಮೃದ್ಧಿಯಾಗಿವೆ.

ಮಂಡಳಿಯು ಕಲ್ಯಾಣ–ಕರ್ನಾಟಕ ಪ್ರದೇಶದ ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ಬಳಕೆಯ ಬಗ್ಗೆ ಯಾವುದೇ ಅಧ್ಯಯನಗಳನ್ನು ನಡೆಸಿರಲಿಲ್ಲ ಮತ್ತು ಪರಿಸರದ ಮೇಲೆ ಅದರ ಅಭಿವೃದ್ಧಿ ಕಾರ್ಯಗಳ ಪ್ರಭಾವದ ಅಧ್ಯಯನಗಳನ್ನೂ ನಡೆಸಿರಲಿಲ್ಲ. ನಿರ್ಮಾಣ ಕಾಮಗಾರಿಗಳಲ್ಲಿ ಬಳಸುವ ನೈಸರ್ಗಿಕ ಖನಿಜಗಳಿಗೆ ಸಂಬಂಧಿಸಿದಂತೆ ಅನುಷ್ಠಾನಗೊಳಿಸುವ ಏಜೆನ್ಸಿಗಳು ತೊಡಗಿಸಿಕೊಂಡಿರುವ ಗುತ್ತಿಗೆದಾರರು ಅಗತ್ಯವಾದ ಖನಿಜ ರವಾನೆ ಪರವಾನಗಿಗಳನ್ನು (ಎಮ್‌ಡಿಪಿ) ಸಲ್ಲಿಸದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇವುಗಳು ಗುತ್ತಿಗೆದಾರರು ಈ ಪ್ರದೇಶದಲ್ಲಿ ನೈಸರ್ಗಿಕ ಸಂಪನ್ಮೂಲಗಳನ್ನು ಅನಧಿಕೃತವಾಗೊ ಬಳಸುವ ಸೂಚಕಗಳಾಗಿದ್ದು ಇದು ನೈಸರ್ಗಿಕ ಸಂಪನ್ಮೂಲಗಳ ಬಳಕೆಯ ಲೆಕ್ಕಪರಿಶೋಧನೆ ಮತ್ತು ಮೇಲ್ವಿಚಾರಣೆಯನ್ನು ಬಲಪಡಿಸುವ ಅಗತ್ಯವನ್ನು ಸೂಚಿಸುತ್ತದೆ.

## 2.8 ಜಿಲ್ಲಾ ಮಟ್ಟದ ಒಟ್ಟು ಆಂತರಿಕ ಉತ್ಪನ್ನ

ಜನರ ಅಭಿವೃದ್ಧಿ ಮತ್ತು ಜೀವನಮಟ್ಟವನ್ನು ಹಾಗೂ ಆ ಮಟ್ಟದಲ್ಲಿ ಅವರ ಯೋಗಕ್ಷೇಮವನ್ನು ತಿಳಿಯಲು ಒಂದು ರಾಜ್ಯಕ್ಕಿಂತ ಚಿಕ್ಕದಾದ ಪ್ರದೇಶಗಳ ಆರ್ಥಿಕ ಚಟುವಟಿಕೆಗಳ ಮಾಹಿತಿ/ ಅಂಕಿಅಂಶಗಳು/ಸೂಚಕಗಳು ಯೋಜನೆ ಮತ್ತು ನೀತಿ ಉದ್ದೇಶಗಳಿಗಾಗಿ ಸಾಮಾನ್ಯವಾಗಿ ಪ್ರಾದೇಶಿಕ ಮತ್ತು ರಾಜ್ಯ ಅಧಿಕಾರಿಗಳಿಗೆ ಅಗತ್ಯವಿರುತ್ತದೆ.

ಹಣಕಾಸು ಆಯೋಗಗಳು ಮತ್ತು ಹಿಂದಿನ ಯೋಜನಾ ಆಯೋಗ ಮತ್ತು ಪ್ರಸ್ತುತ ಎನ್‌ಐಟಿಐ ಆಯೋಗ ಸಾರ್ವಜನಿಕ ನೀತಿ ನಿರೂಪಣೆ ಮತ್ತು ಅನುಷ್ಠಾನದಲ್ಲಿ ಲಕ್ಷ್ಯದ ಅವಶ್ಯಕತೆಯಿರುವ ಜಿಲ್ಲೆಯನ್ನು ಸ್ವತಂತ್ರ ಭೌಗೋಳಿಕ ಘಟಕವಾಗಿ ಗುರುತಿಸಿದ್ದವು. ಜಿಲ್ಲೆಯ ಆದಾಯದ ಅಂದಾಜುಗಳು ಅಂದರೆ. ಜಿಲ್ಲೆಯ ಆಂತರಿಕ ಉತ್ಪನ್ನವು (ಡಿಡಿಪಿ) ಜಿಲ್ಲೆಯ ಆರ್ಥಿಕ ಬೆಳವಣಿಗೆ/ಅಭಿವೃದ್ಧಿ ಮತ್ತು ಜಿಲ್ಲೆಯ ನಿವಾಸಿಗಳ ಜೀವನ ಮಟ್ಟವನ್ನು ಹಾಗೂ ಜಿಲ್ಲೆಯ ತಲಾ ಆದಾಯದ ಅಂದಾಜುಗಳನ್ನು ಅಳೆಯಲು ಪ್ರಮುಖ ಸೂಚಕಗಳೆಂದು ಪರಿಗಣಿಸಲಾಗಿತ್ತು. ರಾಜ್ಯವು ತಯಾರಿಸುವ ಮಾನವ ಅಭಿವೃದ್ಧಿ ವರದಿಯಲ್ಲಿ ಸೇರಿಸಲು ಡಿಡಿಪಿ ಅಂದಾಜುಗಳ ತಯಾರಿಕೆಯು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತು ಏಕೆಂದರೆ ಅದು ಸಂಯೋಜಿತ ಮಾನವ ಅಭಿವೃದ್ಧಿ ಸೂಚ್ಯಂಕವನ್ನು (ಹೆಚ್‌ಡಿಐ) ನಿರ್ಮಿಸುವ ಮೂರು ಸೂಚಕಗಳಲ್ಲಿ ಒಂದಾಗಿತ್ತು (ಇನ್ನೆರಡು ಜೀವಿತಾವಧಿ ಮತ್ತು ಶೈಕ್ಷಣಿಕ ಗಮನ).

ಆದರೆ, ಮಂಡಳಿಯು ಯಾವುದೇ ಆರು ಜಿಲ್ಲೆಗಳಿಗೆ ಸಂಬಂಧಿಸಿದಂತೆ ಜಿಲ್ಲಾ ದೇಶೀಯ ಉತ್ಪನ್ನ ಅಂಕಿ ಅಂಶಗಳ ದತ್ತಾಂಶವನ್ನು ಹೊಂದಿರಲಿಲ್ಲ. ಹೀಗೆ, ಜಿಲ್ಲೆಗಳ ಸಾಪೇಕ್ಷ ಅಭಿವೃದ್ಧಿ ಮಟ್ಟವನ್ನು ಪರಿಗಣಿಸದೆ ಮಂಡಳಿಯ ಕಾರ್ಯ ಯೋಜನೆಗಳನ್ನು ತಯಾರಿಸಲಾಗಿತ್ತು.

ಆರೋಗ್ಯ, ಪೌಷ್ಟಿಕಾಂಶ, ಸಾಕ್ಷರತೆ, ಶಿಕ್ಷಣ, ನೈರ್ಮಲ್ಯ, ಕೌಶಲ್ಯ ಅಭಿವೃದ್ಧಿ, ಪ್ರವಾಸೋದ್ಯಮ, ನೀರು ಸರಬರಾಜು, ಅರಣ್ಯ ವ್ಯಾಪ್ತಿ, ವಾಯು ಸಾರಿಗೆ ಇತ್ಯಾದಿ ಕ್ಷೇತ್ರಗಳಲ್ಲಿ ಸಾಮಾನ್ಯವಾಗಿ ಬಳಸುವ ಕೆಲವು ಸೂಚಕಗಳ ವಿಷಯದಲ್ಲಿ ಪ್ರದೇಶದ ಸ್ಥಿತಿಯನ್ನು ಮುಂದಿನ ಕಂಡಿಕೆಗಳಲ್ಲಿ ವಿವರವಾಗಿ ಚರ್ಚಿಸಲಾಗಿದೆ.

## 2.9 ಆರೋಗ್ಯ ಸೂಚ್ಯಂಕಗಳು

ಆರೋಗ್ಯ ಮತ್ತು ಅಭಿವೃದ್ಧಿ ಪರಸ್ಪರ ನಿಕಟ ಸಂಬಂಧ ಹೊಂದಿದೆ ಮತ್ತು ಒಂದು ಇನ್ನೊಂದರ ಮೇಲೆ ಪರಿಣಾಮ ಬೀರುತ್ತದೆ. ಪ್ರಾದೇಶಿಕ ಆರೋಗ್ಯ ಅಸಮಾನತೆಗಳು ಮುಖ್ಯವಾಗಿ ಆರ್ಥಿಕ ಅಭಿವೃದ್ಧಿಯ ಮಟ್ಟದಲ್ಲಿನ ವ್ಯತ್ಯಾಸಗಳು ಮತ್ತು ಗುಣಮಟ್ಟದ ಆರೋಗ್ಯ ಸೌಲಭ್ಯಗಳ ಲಭ್ಯತೆಯ ವ್ಯತ್ಯಾಸಗಳ ಪರಿಣಾಮವಾಗಿದೆ. ಮಹತ್ವಾಕಾಂಕ್ಷೆಯ ಜಿಲ್ಲೆಗಳ ಕಾರ್ಯಕ್ರಮ (ಎನ್‌ಐಟಿಐ ಆಯೋಗ) ಆರೋಗ್ಯ ಮತ್ತು ಪೋಷಣೆಯ ವಿಷಯದಲ್ಲಿ 13 ಸೂಚಕಗಳನ್ನು ಗುರುತಿಸಿತ್ತು. ಕಲ್ಯಾಣ–ಕರ್ನಾಟಕ ಪ್ರದೇಶದ ಕೆಲವು ಸೂಚಕಗಳ ಕಾರ್ಯಕ್ಷಮತೆಯನ್ನು ರಾಜ್ಯದ ಉಳಿದ ಭಾಗಗಳಿಗೆ ಹೋಲಿಸಿ ಕೆಳಗೆ ಚರ್ಚಿಸಲಾಗಿದೆ:

### *2.9.1 ಗರ್ಭಿಣಿ ಮಹಿಳೆಯರ ಆರೈಕೆಯ ಗುಣಮಟ್ಟ*

ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಹೆಚ್‌ಒ) ತಾಯಿ ಮತ್ತು ಮಕ್ಕಳ ಮರಣವನ್ನು ತಡೆಗಟ್ಟುವಲ್ಲಿ ಆದ್ಯತೆಯಾಗಿ ಮಹಿಳೆಯರು ಮತ್ತು ಮಕ್ಕಳ ಆರೈಕೆಯ ಗುಣಮಟ್ಟವನ್ನು ಗುರುತಿಸಿತ್ತು ಮತ್ತು 'ಪ್ರತಿಯೊಬ್ಬ ಮಹಿಳೆ, ಮಗು ಮತ್ತು ಹದಿಹರೆಯದವರು ತಮ್ಮ ಜೀವನಪೂರ್ತಿ ಗುಣಮಟ್ಟದ ಆರೈಕೆ ಮತ್ತು ಕಾಳಜಿಯನ್ನು ಪಡೆಯಬೇಕು ಎಂಬ ದೃಷ್ಟಿಯನ್ನು ಹೊಂದಿತ್ತು. ತಾಯಂದಿರು ಮತ್ತು ನವಜಾತ ಶಿಶುಗಳಿಗೆ ಹೆರಿಗೆಯ ಸುತ್ತಲಿನ ಅವಧಿಯು ಅತ್ಯಂತ ನಿರ್ಣಾಯಕವಾಗಿದೆ ಎಂದು ಗುರುತಿಸಲಾಗಿತ್ತು.

❖ *ಪ್ರಸವಪೂರ್ವ ಆರೈಕೆ*

2020–21ರ ಅವಧಿಯಲ್ಲಿ ಪ್ರಸವಪೂರ್ವ ಆರೈಕೆ (ಎಎನ್‌ಸಿ) ಪಡೆಯುವ ಮಹಿಳೆಯರ ದತ್ತಾಂಶವನ್ನು ಲೆಕ್ಕಪರಿಶೋಧನೆಯು ವಿಶ್ಲೇಷಿಸಿತು. 2015–16ರ ಅವಧಿಯಲ್ಲಿ ಕಲ್ಯಾಣ–ಕರ್ನಾಟಕ ಪ್ರದೇಶದಲ್ಲಿ 3 ಪ್ರಸವಪೂರ್ವ ತಪಾಸಣೆಗಳನ್ನು ಪಡೆದ ಗರ್ಭಿಣಿಯರ ಶೇಕಡಾವಾರು ಪ್ರಮಾಣವು ರಾಜ್ಯದ ಸರಾಸರಿಗಿಂತ ಗಮನಾರ್ಹವಾಗಿ ಕಡಿಮೆಯಿದ್ದಿತು. ಅದೇ ರೀತಿ, 2020–21ರ ಅವಧಿಯಲ್ಲಿ ಸಹ, ಕಲ್ಯಾಣ–ಕರ್ನಾಟಕ ಪ್ರದೇಶದಲ್ಲಿ ನಾಲ್ಕು ಅಥವಾ ಅದಕ್ಕಿಂತ ಹೆಚ್ಚು ಪ್ರಸವಪೂರ್ವ ತಪಾಸಣೆಗಳನ್ನು ಪಡೆದ ಗರ್ಭಿಣಿಯರ ಶೇಕಡಾವಾರು ಪ್ರಮಾಣವು, **ಕೋಷ್ಟಕ–2.5**ರಲ್ಲಿ ತೋರಿಸಿರುವಂತೆ, ರಾಜ್ಯಕ್ಕಿಂತ ಮತ್ತು ರಾಜ್ಯದ ಉಳಿದ ಸರಾಸರಿಗಿಂತ ಕಡಿಮೆಯಿದ್ದಿತು.

**ಕೋಷ್ಟಕ–2.5: 2015–16 ಮತ್ತು 2020–21ರಲ್ಲಿ ಕಲ್ಯಾಣ–ಕರ್ನಾಟಕ ಪ್ರದೇಶದಲ್ಲಿ ಗರ್ಭಿಣಯರಿಗೆ ಪ್ರಸವಪೂರ್ವ ಆರೈಕೆ**


| ಪ್ರದೇಶ | 2015–16 (3 ಪ್ರಸವಪೂರ್ವ ತಪಾಸಣೆಗಳು) | 2020–21 (4 ಅಥವಾ ಹೆಚ್ಚು ಪ್ರಸವಪೂರ್ವ ತಪಾಸಣೆಗಳು) |
|---|---|---|
| ಕಲ್ಯಾಣ–ಕರ್ನಾಟಕ ಪ್ರದೇಶ | 86.27 | 87.31 |
| ರಾಜ್ಯದ ಉಳಿದ ಪ್ರದೇಶ | 97.99 | 90.32 |
| ರಾಜ್ಯ ಸರಾಸರಿ | 95.23 | 89.60 |

ಆಧಾರ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಪಡೆದ ಮಾಹಿತಿ

❖ *ತೀವ್ರ ರಕ್ತಹೀನತೆಗೆ ಚಿಕಿತ್ಸೆ ಪಡೆದ ಮಹಿಳೆಯರು*

ಕೆಳಗಿರುವ **ನಕ್ಷೆ–2.8**ರಲ್ಲಿ ತೋರಿಸಿರುವಂತೆ, ರಾಜ್ಯದ ಸರಾಸರಿಗೆ (ಶೇಕಡಾ 71.34) ಕ್ಕೆ ಹೋಲಿಸಿದರೆ ಕಲ್ಯಾಣ–ಕರ್ನಾಟಕ ಪ್ರದೇಶದಲ್ಲಿ ತೀವ್ರ ರಕ್ತಹೀನತೆಗೆ ಚಿಕಿತ್ಸೆ ಪಡೆದ ಮಹಿಳೆಯರ ಶೇಕಡಾವಾರು 62.47ರಷ್ಟಿದ್ದು ಕನಿಷ್ಟ ಮಟ್ಟದಲ್ಲಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

**ನಕ್ಷೆ–2.8 ಕಲ್ಯಾಣ–ಕರ್ನಾಟಕ ಪ್ರದೇಶದಲ್ಲಿ ತೀವ್ರ ರಕ್ತಹೀನತೆಗೆ ಚಿಕಿತ್ಸೆ ಪಡೆದ ಮಹಿಳೆಯರ ವಿಶ್ಲೇಷಣೆ**




ಆಧಾರ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಪಡೆದ ಮಾಹಿತಿ

### ❖ *ಸಾಂಸ್ಥಿಕ ಜನನಗಳು*

ಆರು ಜಿಲ್ಲೆಗಳಲ್ಲಿ ಒಟ್ಟು ಅಂದಾಜು ಹೆರಿಗೆಗಳಿಗೆ ಸಾಂಸ್ಥಿಕ ಹೆರಿಗೆಗಳ ಶೇಕಡಾವಾರು ಸುಧಾರಣೆಯಾಗಿದ್ದರೂ, ಕಲ್ಯಾಣ–ಕರ್ನಾಟಕ ಪ್ರದೇಶದ ಆರರಲ್ಲಿ ಐದು ಜಿಲ್ಲೆಗಳಲ್ಲಿ ಇನ್ನೂ ರಾಜ್ಯ ಸರಾಸರಿಗಿಂತ ಕಡಿಮೆಯಿದ್ದಿತು ಎಂದು 2015–16 ಮತ್ತು 2019–20ರ ಕುಟುಂಬ ಆರೋಗ್ಯ ಸಮೀಕ್ಷೆಯ ದತ್ತಾಂಶಗಳ ವಿಶ್ಲೇಷಣೆಯು ತೋರಿಸಿತು. ಈ ಕೆಳಗೆ ಚರ್ಚಿಸಿದಂತೆ, ಇದಕ್ಕೆ ಸಾಕಷ್ಟು ಪಿಎಚ್‌ಸಿಗಳು, ಎಫ್‌ಆರ್‌ಯು ಸೌಲಭ್ಯಗಳು, ವೈದ್ಯರು ಇತ್ಯಾದಿಗಳ ಲಭ್ಯತೆಯಿಲ್ಲದಿರುವುದಕ್ಕೆ ಅಧ್ಯಾರೋಪಿಸಬಹುದು.

ಅಧ್ಯಾಯ–IIIರಲ್ಲಿ ಚರ್ಚಿಸಿದಂತೆ ಕಲಬುರಗಿ ಜಿಲ್ಲೆಯು ಮಂಡಳಿಯಿಂದ ಅನುದಾನದ ಹೆಚ್ಚಿನ ಪಾಲನ್ನು ಪಡೆಯುತ್ತಿದ್ದರೂ, ಜಿಲ್ಲೆಯಲ್ಲಿ ಸಾಂಸ್ಥಿಕ ಜನನಗಳು ಶೇಕಡಾ 2.4ರಷ್ಟು ಕಡಿಮೆಯಾಗಿದ್ದಿತು ಮತ್ತು ಎನ್‌ಎಫ್‌ಎಚ್‌ಎಸ್–5 ಅವಧಿಯಲ್ಲಿ ಕಲಬುರಗಿ ರಾಜ್ಯದಲ್ಲಿ ಅತ್ಯಂತ ಕಡಿಮೆ ಸಾಧನೆ ಮಾಡಿರುವ ಜಿಲ್ಲೆಯಾಗಿತ್ತು.

ರಾಯಚೂರು ಮತ್ತು ಕೊಪ್ಪಳದಲ್ಲಿ ಸಾಂಸ್ಥಿಕ ಜನನಗಳ ಶೇಕಡಾವಾರು ಪ್ರಮಾಣವು ಸುಧಾರಣೆಯಾಗಿದ್ದರೂ ಸಹ ಅವು ಎನ್‌ಎಫ್‌ಹೆಚ್‌ಎಸ್–5 ಅವಧಿಯಲ್ಲಿ ರಾಜ್ಯದಲ್ಲಿ ಎರಡನೇ ಮತ್ತು ಮೂರನೇ ಕಡಿಮೆ ಸಾಧನೆ ಮಾಡಿದ ಜಿಲ್ಲೆಗಳಾಗಿದ್ದವು.

ರಾಜ್ಯದೊಂದಿಗೆ ಕಲ್ಯಾಣ–ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿನ ಸಾಂಸ್ಥಿಕ ಜನನಗಳ ಹೋಲಿಕೆಯನ್ನು ಕೆಳಗಿನ **ಕೋಷ್ಟಕ–2.6**ರಲ್ಲಿ ನೀಡಲಾಗಿದೆ:

**ಕೋಷ್ಟಕ–2.6: ಕಲ್ಯಾಣ–ಕರ್ನಾಟಕ ಪ್ರದೇಶದಲ್ಲಿ ಸಾಂಸ್ಥಿಕ ಜನನಗಳ ಶೇಕಡಾವಾರು**


| ಜಿಲ್ಲೆಗಳು | ಎನ್‌ಎಫ್‌ಹೆಚ್‌ಎಸ್–4 (15–16) | ಎನ್‌ಎಫ್‌ಹೆಚ್‌ಎಸ್–5 (19–20) | ವೃದ್ಧಿ |
|---|---|---|---|
| ಕಲಬುರಗಿ | 91.1 | 88.7 | –2.4 |
| ರಾಯಚೂರು | 79.7 | 88.9 | 9.2 |
| ಕೊಪ್ಪಳ | 84.8 | 90.7 | 5.9 |
| ಯಾದಗಿರಿ | 90.5 | 93.3 | 2.8 |
| ಬಳ್ಳಾರಿ | 86 | 95.7 | 9.7 |
| ಬೀದರ್ | 98 | 99 | 1 |
| ರಾಜ್ಯ ಸರಾಸರಿ | 94 | 97 | 3 |

### *2.9.2 ಶಿಶು ಮರಣ ಪ್ರಮಾಣ*

ಡಾ.ನಂಜುಂಡಪ್ಪ ಸಮಿತಿಯು ಶಿಶು ಮರಣ ಪ್ರಮಾಣವನ್ನು (ಐಎಮ್‌ಆರ್) ಸಮಾಜದ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯ ಅತ್ಯಂತ ಸೂಕ್ಷ್ಮ ಸೂಚಕಗಳಲ್ಲಿ ಒಂದೆಂದು ಪರಿಗಣಿಸಿದೆ. ರಾಜ್ಯದಲ್ಲಿ ಶಿಶು ಮರಣ ಪ್ರಮಾಣದ ಲೆಕ್ಕಪರಿಶೋಧನಾ ವಿಶ್ಲೇಷಣೆಯು ರಾಜ್ಯದಾದ್ಯಂತ ವ್ಯತ್ಯಾಸಗಳನ್ನು ಗಮನಿಸಿದರೂ,

**ನಕ್ಷೆ–2.9**ರಲ್ಲಿ ಚಿತ್ರಿಸಿರುವಂತೆ ರಾಜ್ಯದ ಇತರ ಭಾಗಗಳಿಗೆ ಹೋಲಿಸಿದರೆ ಕಲ್ಯಾಣ–ಕರ್ನಾಟಕ ಪ್ರದೇಶದಲ್ಲಿ ಇದು ಹೆಚ್ಚಾಗಿದ್ದಿತು ಎಂಬುದನ್ನು ತೋರಿಸಿತು ಎಂದು ತೋರಿಸಿದೆ.

**ನಕ್ಷೆ–2.9: 2018–19ರಿಂದ 2021ರ ಅವಧಿಯಲ್ಲಿ ಶಿಶು ಮರಣ ಪ್ರಮಾಣದ ಹೋಲಿಕೆ**




ಆಧಾರ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಹೀಗೆ, ಕಲ್ಯಾಣ–ಕರ್ನಾಟಕ ಪ್ರದೇಶದ ಐಎಮ್‌ಆರ್ ರಾಜ್ಯದ ಉಳಿದ ಭಾಗಗಳಿಗಿಂತ ಹೆಚ್ಚಾಗಿದ್ದಿತು ಮತ್ತು 2020–21ರಲ್ಲಿ ಭಿನ್ನತೆಯು ಮತ್ತಷ್ಟು ಹೆಚ್ಚಾಯಿತು.

### ❖ *5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಮರಣ ಪ್ರಮಾಣ*

ರಾಜ್ಯದಲ್ಲಿ 5 ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣದ ಲೆಕ್ಕಪರಿಶೋಧನೆಯ ವಿಶ್ಲೇಷಣೆಯು ಕಲ್ಯಾಣ–ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳ ಪೈಕಿ ಐದು ಜಿಲ್ಲೆಗಳಲ್ಲಿ ಅದು 2020–21ರ ಅವಧಿಯಲ್ಲಿ ಕೆಳಗಿನ **ಕೋಷ್ಟಕ–2.7**ರಲ್ಲಿ ತೋರಿಸಿರುವಂತೆ ರಾಜ್ಯ ಸರಾಸರಿಗಿಂತ ಗಮನಾರ್ಹವಾಗಿ ಹೆಚ್ಚಾಗಿದ್ದಿತು ಎಂಬುದನ್ನು ತಿಳಿಯಪಡಿಸಿತು.

**ಕೋಷ್ಟಕ 2.7: 2014–15 ಮತ್ತು 2020–21ರಲ್ಲಿ 5 ವರ್ಷದೊಳಗಿನ ಮರಣ ಪ್ರಮಾಣ**


| ಜಿಲ್ಲೆ | 2014–15 | 2020–21 | ಬದಲಾವಣೆ |
|---|---|---|---|
| ಬಳ್ಳಾರಿ | 13.03 | 17.48 | 4.45 |
| ಬೀದರ್ | 9.92 | 7.26 | –2.66 |
| ಕಲಬುರಗಿ | 11.67 | 9.2 | –2.47 |
| ಕೊಪ್ಪಳ | 6.98 | 10.6 | 3.62 |
| ರಾಯಚೂರು | 20.49 | 15.5 | –4.99 |
| ಯಾದಗಿರಿ | 3.25 | 7.68 | 4.43 |
| ರಾಜ್ಯ | 8.04 | 8.48 | 0.44 |

ಕಲ್ಯಾಣ–ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳ ಪೈಕಿ ಮೂರು ಜಿಲ್ಲೆಗಳು 2014–15ರಿಂದ 2020–21ರ ಅವಧಿಯಲ್ಲಿ ರಾಜ್ಯಕ್ಕಿಂತ ಗಮನಾರ್ಹ ಹೆಚ್ಚಳವನ್ನು ಕಂಡಿದ್ದವು ಎಂಬುದನ್ನೂ ಸಹ ಗಮನಿಸಲಾಯಿತು.

### *2.9.3 ತಾಯಂದಿರ ಮರಣ ಪ್ರಮಾಣ*

ಗರ್ಭಾವಸ್ಥೆ ಮತ್ತು ಹೆರಿಗೆಯ ನಿರ್ಣಾಯಕ ಅವಧಿಯಲ್ಲಿ ಮಹಿಳೆಯರಲ್ಲಿ ಹೆಚ್ಚಿನ ಮರಣದ ನಿರಂತರತೆಗೆ ಸಮಾಜದಲ್ಲಿ ಆಳವಾಗಿ ಬೇರೂರಿರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚರಣೆಗಳು ಕಾರಣವಾಗಿವೆ. ಕೆಳಗಿನ **ನಕ್ಷೆ–2.10**ರಲ್ಲಿ ತೋರಿಸಿರುವಂತೆ, 2018–19ರಿಂದ 2020–21ರ ಅವಧಿಯಲ್ಲಿ ರಾಜ್ಯದ ಉಳಿದ ಭಾಗಗಳಿಗಿಂತ ಕಲ್ಯಾಣ–ಕರ್ನಾಟಕ ಪ್ರದೇಶವು ತಾಯಂದಿರ ಹೆಚ್ಚಿನ ಮರಣ ಪ್ರಮಾಣವನ್ನು (ಎಮ್‌ಎಮ್‌ಆರ್) ಹೊಂದಿತ್ತು ಎಂಬುದು ದತ್ತಾಂಶದ ವಿಶ್ಲೇಷಣೆಯಿಂದ ತಿಳಿದುಬಂದಿತು.

**ನಕ್ಷೆ–2.10: 2018ರಿಂದ 2021ರ ಅವಧಿಯಲ್ಲಿ ತಾಯಂದಿರ ಮರಣ ಪ್ರಮಾಣದ ಹೋಲಿಕೆ**




ಆಧಾರ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಹೀಗೆ, ಕಲ್ಯಾಣ–ಕರ್ನಾಟಕ ಪ್ರದೇಶದ ಎಮ್ಎಮ್ಆರ್ ರಾಜ್ಯದ ಉಳಿದ ಭಾಗಗಳಿಗಿಂತ ಹೆಚ್ಚಾಗಿದ್ದಿತು ಮತ್ತು 2020–21ರಲ್ಲಿ ಈ ವ್ಯತ್ಯಾಸವು ಮತ್ತಷ್ಟು ಹೆಚ್ಚಾಯಿತು.

### *2.9.4 ಕಲ್ಯಾಣ–ಕರ್ನಾಟಕ ಪ್ರದೇಶದಲ್ಲಿ ಆರೋಗ್ಯ ಮೂಲಸೌಕರ್ಯಗಳ ಸ್ಥಿತಿ*

ಭಾರತ ಸರ್ಕಾರವು ರೋಗಿಗಳಿಗೆ ಉತ್ತಮ ಆರೋಗ್ಯ ಸೇವೆಯನ್ನು ನೀಡಲು ದೇಶದ ಆಸ್ಪತ್ರೆಗಳಲ್ಲಿ ಗುಣಮಟ್ಟವನ್ನು ಸುಧಾರಿಸಲು ಆರೋಗ್ಯ ಸಂಸ್ಥೆಗಳಿಗೆ ಗುಣಮಟ್ಟದ ಪ್ರಮಾಣೀಕರಣ ಪ್ರಕ್ರಿಯೆಯನ್ನು ಉತ್ತೇಜಿಸುತ್ತದೆ. ಈ ಉಪಕ್ರಮವು ಆರೋಗ್ಯ ಸೇವೆಗಳನ್ನು ಹೆಚ್ಚಿಸುವ ಸಂದರ್ಭದಲ್ಲಿ ಆಸ್ಪತ್ರೆಗಳಿಗೆ ತ್ವರಿತ ಪ್ರಮಾಣೀಕರಣವನ್ನು ಪಡೆಯಲು ಸಹಾಯ ಮಾಡುವ ಗುರಿಯನ್ನು ಹೊಂದಿದೆ. ಗುಣಮಟ್ಟದ ಪ್ರಮಾಣೀಕರಣದ ಮೂರು ಹಂತಗಳಿವೆ: ಚಿನ್ನ, ಬೆಳ್ಳಿ ಮತ್ತು ಕಂಚು, ಹಾಗೂ ಈ ಉಪಕ್ರಮದ ಅಡಿಯಲ್ಲಿ ಚಿನ್ನವು ಅತ್ಯುನ್ನತ ಮಟ್ಟವಾಗಿದೆ. ಆದರೆ, ಈ ಪ್ರದೇಶದಲ್ಲಿನ ಆರೋಗ್ಯ ಮೂಲಸೌಕರ್ಯವನ್ನು ವಿಶ್ಲೇಷಿಸಲು ಮಂಡಳಿಯು ಯಾವುದೇ ದತ್ತಾಂಶವನ್ನು ಹೊಂದಿರಲಿಲ್ಲ.

ಕಲ್ಯಾಣ–ಕರ್ನಾಟಕ ಪ್ರದೇಶವನ್ನು ಒಳಗೊಂಡಂತೆ ರಾಜ್ಯ ಮಟ್ಟದಲ್ಲಿ ಇಂತಹ ಅಧ್ಯಯನಗಳನ್ನು ಕೈಗೊಳ್ಳಲಾಗುತ್ತಿದೆ ಮತ್ತು ವಿಶ್ಲೇಷಿಸಲಾಗುತ್ತಿದೆ ಎಂದು ಮಂಡಳಿಯು ತಿಳಿಸಿತು (ಜುಲೈ 2022).

ಕಲ್ಯಾಣ–ಕರ್ನಾಟಕ ಪ್ರದೇಶದ ಸಮಗ್ರ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಮಂಡಳಿಯನ್ನು ಸ್ಥಾಪಿಸಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಆದರೂ, ಪ್ರಾದೇಶಿಕ ಅಸಮತೋಲನವನ್ನು ನಿವಾರಿಸಲು ಅತ್ಯಗತ್ಯವಾಗಿರುವ ಮಕ್ಕಳಲ್ಲಿ ಕಡಿಮೆ ತೂಕ, ಮಹಿಳೆಯರು ಮತ್ತು ಮಕ್ಕಳಲ್ಲಿ ರಕ್ತಹೀನತೆ, ಕಲ್ಯಾಣ–ಕರ್ನಾಟಕ ಪ್ರದೇಶದಲ್ಲಿ ಕಡಿಮೆ ಪ್ರಮಾಣದ ಸಾಂಸ್ಥಿಕ ಜನನಗಳಿಗೆ ಕಾರಣಗಳು, ಮುಂತಾದ ಆರೋಗ್ಯ ಸೂಚಕಗಳ ಅಭಿವೃದ್ಧಿಯ ಸ್ಥಿತಿಯನ್ನು ನಿರ್ಣಯಿಸಲು ಮಂಡಳಿಯು ದತ್ತಾಂಶವನ್ನು ಸಂಗ್ರಹಿಸಿರಲಿಲ್ಲ.


### *2.9.5 ಐದು ಲಕ್ಷ ಜನಸಂಖ್ಯೆಗೆ ಮೊದಲ ರೆಫರಲ್ ಘಟಕಗಳ ಸಂಖ್ಯೆ*

ಎನ್ಐಟಿಐ ಆಯೋಗವು ಎಲ್ಲಾ ತುರ್ತುಸ್ಥಿತಿಗಳ ಜೊತೆಗೆ ಮಹಿಳೆಯರ ಆರೋಗ್ಯ ಸೇವೆಗಳನ್ನು ಸುಧಾರಿಸುವ ಸೂಚಕವಾಗಿ ಐದು ಲಕ್ಷ ಜನಸಂಖ್ಯೆಗೆ ಮೊದಲ ರೆಫರಲ್ ಘಟಕಗಳನ್ನು (ಎಫ್ಆರ್ಯು)[4]

[4] ಮೊದಲ ರೆಫರಲ್ ಯುನಿಟ್‌ಗಳು (ಎಫ್ಆರ್ಯು) ಸಿಸೇರಿಯನ್ ವಿಭಾಗ, ನವಜಾತ ಶಿಶು ಆರೈಕೆ, ಅನಾರೋಗ್ಯದ ಮಕ್ಕಳ ತುರ್ತು ಆರೈಕೆ, ಪೂರ್ಣ ಶ್ರೇಣಿಯ ಕುಟುಂಬ ಕಲ್ಯಾಣ ಸೇವೆಗಳು, ಸುರಕ್ಷಿತ ಗರ್ಭಪಾತ ಸೇವೆ, ಎಸ್‌ಟಿಐ/ಆರ್‌ಟಿಐ ಚಿಕಿತ್ಸೆ, ರಕ್ತ ಶೇಖರಣಾ ಘಟಕದ ಲಭ್ಯತೆ ಮತ್ತು ರೆಫರಲ್ ಸಾರಿಗೆ ಸೇವೆಗಳಂತಹ ಸಮಗ್ರ ಪ್ರಸೂತಿ ಆರೈಕೆ ಸೇವೆಗಳನ್ನು ಒದಗಿಸುತ್ತವೆ.

ಪರಿಗಣಿಸಿದೆ. ರಾಜ್ಯದ ಉಳಿದ ಭಾಗಗಳಿಗೆ ಹೋಲಿಸಿದರೆ ಕಲ್ಯಾಣ–ಕರ್ನಾಟಕ ಪ್ರದೇಶವು ಕಡಿಮೆ ಸಂಖ್ಯೆಯ ಎಫ್‌ಆರ್‌ಯುಗಳನ್ನು ಹೊಂದಿತ್ತು ಎಂಬುದನ್ನು ದತ್ತಾಂಶದ ವಿಶ್ಲೇಷಣೆಯು ತಿಳಿಯಪಡಿಸಿತು ಮತ್ತು **ನಕ್ಷೆ–2.11**ರಲ್ಲಿ ತೋರಿಸಿರುವಂತೆ, ಈ ಕಾರಣದಿಂದಾಗಿ ಪ್ರದೇಶದಲ್ಲಿ ಸಾಂಸ್ಥಿಕ ಜನನಗಳು ಕಡಿಮೆಯಾಗಿದ್ದವು. ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ ಲೆಕ್ಕಪರಿಶೋಧನೆಯು ಅಪೂರ್ಣ ಅಥವಾ ಕಾರ್ಯನಿರ್ವಹಿಸದ ಆಸ್ಪತ್ರೆ ಕಟ್ಟಡಗಳನ್ನು ಗಮನಿಸಿತು.

**ನಕ್ಷೆ–2.11: ಐದು ಲಕ್ಷ ಜನಸಂಖ್ಯೆಗೆ ಎಫ್‌ಆರ್‌ಯುಗಳ ಲಭ್ಯತೆ**




ಆಧಾರ: ಕರ್ನಾಟಕ ಅಟ್ ಎ ಗ್ಲಾನ್ಸ್, ಆರ್ಥಿಕ ಮತ್ತು ಸಂಖ್ಯಾಶಾಸ್ತ್ರ ಇಲಾಖೆ

### *2.9.6 ಆರೋಗ್ಯ ಮೂಲಸೌಕರ್ಯ ಸೂಚ್ಯಂಕ*

ವೈದ್ಯರು, ಸರ್ಕಾರಿ ಆಸ್ಪತ್ರೆಗಳಲ್ಲಿನ ಹಾಸಿಗೆಗಳು ಮತ್ತು ಕುಡಿಯುವ ನೀರು ಈ ಮೂರು ಸೂಚಕಗಳನ್ನು ಒಳಗೊಂಡಿರುವ ಆರೋಗ್ಯ ಮೂಲಸೌಕರ್ಯ ಸೂಚ್ಯಂಕವನ್ನು (ಹೆಚ್‌ಐಐ) ಆರೋಗ್ಯ ಸೇವೆಗಳಲ್ಲಿ ಪ್ರಾದೇಶಿಕ ಅಸಮತೋಲನವನ್ನು ನಿರ್ಣಯಿಸಲು ಬಳಸಲಾಗುತ್ತದೆ. ಜನರ ಆರೋಗ್ಯವು, ಇತರ ವಿಷಯಗಳ ಜೊತೆಗೆ, ಲಭ್ಯವಿರುವ ವೈದ್ಯರ ಸಂಖ್ಯೆಯನ್ನು ಅವಲಂಬಿಸಿರುತ್ತದೆ.

#### ➢ *ವೈದ್ಯರ ಸಂಖ್ಯೆ*

ಡಾ.ನಂಜುಂಡಪ್ಪ ಸಮಿತಿಯು 10,000 ಜನಸಂಖ್ಯೆಗೆ ವೈದ್ಯರ ಸಂಖ್ಯೆಯನ್ನು ಆರೋಗ್ಯ ಸೂಚಕವಾಗಿ ಪರಿಗಣಿಸಿದೆ. 2013–14 ಮತ್ತು 2020–21ರ ಅವಧಿಯಲ್ಲಿ 10000 ಜನಸಂಖ್ಯೆಗೆ ಲಭ್ಯವಿದ್ದ ವೈದ್ಯರ ಸಂಖ್ಯೆಯ ವಿಶ್ಲೇಷಣೆಯು, **ಕೋಷ್ಟಕ–2.8**ರಲ್ಲಿ ತೋರಿಸಿರುವಂತೆ, ರಾಜ್ಯದ ಉಳಿದ ಪ್ರದೇಶಗಳಿಗೆ ಹೋಲಿಸಿದರೆ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ವೈದ್ಯರ ಲಭ್ಯತೆಯಲ್ಲಿ ವ್ಯಾಪಕ ವ್ಯತ್ಯಾಸಗಳಿದ್ದವು ಎಂಬುದನ್ನು ತಿಳಿಯಪಡಿಸಿತು.

**ಕೋಷ್ಟಕ–2.8: 10,000 ಜನಸಂಖ್ಯೆಗೆ ವೈದ್ಯರ ಹೋಲಿಕೆ**

| ವೈದ್ಯರು | | | |
|---|---|---|---|
| ಜಿಲ್ಲೆ | 2013–14 | 2020–21 | ಬದಲಾವಣೆ |
| ಬಳ್ಳಾರಿ | 0.44 | 0.41 | –0.03 |
| ಬೀದರ್ | 0.52 | 0.54 | 0.02 |
| ಕಲಬುರಗಿ | 0.52 | 0.67 | 0.14 |
| ಯಾದಗಿರಿ | 0.47 | 0.68 | 0.21 |
| ರಾಯಚೂರು | 0.32 | 0.69 | 0.38 |
| ಕೊಪ್ಪಳ | 0.55 | 0.59 | 0.04 |

ಆಧಾರ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಒಂದು ಜಿಲ್ಲೆಯಲ್ಲಿ 10,000 ಜನಸಂಖ್ಯೆಗೆ ವೈದ್ಯರ ಲಭ್ಯತೆಯಲ್ಲಿ 2013–14ರ ಮಟ್ಟದಿಂದ ಬದಲಾವಣೆ ಕಡಿಮೆಯಾಗಿತ್ತು ಎಂಬುದನ್ನು ಗಮನಿಸಲಾಯಿತು. ಇತರ 5 ಜಿಲ್ಲೆಗಳಲ್ಲಿ 10,000 ಜನಸಂಖ್ಯೆಗೆ ವೈದ್ಯರ ಲಭ್ಯತೆಯ ಹೆಚ್ಚಳವು ಅತ್ಯಲ್ಪವಾಗಿತ್ತು.

➢ ***ಆಸ್ಪತ್ರೆ ಹಾಸಿಗೆಗಳ ಸಂಖ್ಯೆ***

ಸರ್ಕಾರಿ ಆಸ್ಪತ್ರೆಗಳಲ್ಲಿನ ಹಾಸಿಗೆಗಳು, ವಿಶೇಷವಾಗಿ ಬಡವರು ಹಾಗೂ ಖಾಸಗಿ ಆಸ್ಪತ್ರೆಗಳು/ ನರ್ಸಿಂಗ್ ಹೋಮ್‌ಗಳಲ್ಲಿ ಚಿಕಿತ್ಸೆ ಪಡೆಯಲು ಸಾಧ್ಯವಾಗದವರಿಗೆ ವಿಶೇಷ ಪ್ರಾಮುಖ್ಯತೆಯನ್ನು ಹೊಂದಿವೆ. ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಯು ಸಮಾಜದಲ್ಲಿನ ಆರೋಗ್ಯ ಸೌಲಭ್ಯಗಳ ಮಟ್ಟವನ್ನು ಪ್ರತಿಬಿಂಬಿಸುವ ಸೂಚಕವಾಗಿದೆ ಮತ್ತು ಹಾಗಾಗಿ ಡಾ.ನಂಜುಂಡಪ್ಪ ಸಮಿತಿಯು 10,000 ಜನಸಂಖ್ಯೆಗೆ ಸರ್ಕಾರಿ ಆಸ್ಪತ್ರೆಗಳಲ್ಲಿನ ಹಾಸಿಗೆಗಳ ಸಂಖ್ಯೆಯನ್ನು ಆರೋಗ್ಯ ಸೌಲಭ್ಯದ ಸೂಚಕವಾಗಿ ಬಳಸಿತು.

ಕಲ್ಯಾಣ–ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ 10,000 ಜನಸಂಖ್ಯೆಗೆ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಯ ವಿಶ್ಲೇಷಣೆಯನ್ನು ಕೆಳಗಿನ **ಕೋಷ್ಟಕ–2.9** ರಲ್ಲಿ ನೀಡಲಾಗಿದೆ:

**ಕೋಷ್ಟಕ–2.9 10,000 ಜನಸಂಖ್ಯೆಗೆ ಆಸ್ಪತ್ರೆ ಹಾಸಿಗೆಗಳ ಹೋಲಿಕೆ**

| ಹಾಸಿಗೆಗಳ ಲಭ್ಯತೆ | | | |
|---|---|---|---|
| ಜಿಲ್ಲೆ | 2013–14 | 2020–21 | ಬದಲಾವಣೆ |
| ಬಳ್ಳಾರಿ | 10.56 | 12.32 | 1.76 |
| ಬೀದರ್ | 11.45 | 9.78 | –1.67 |
| ಕಲಬುರಗಿ | 9.13 | 8.43 | –0.70 |
| ಯಾದಗಿರಿ | 4.98 | 5.85 | 0.87 |
| ರಾಯಚೂರು | 10.75 | 8.81 | –1.94 |
| ಕೊಪ್ಪಳ | 9.25 | 8.95 | –0.30 |

ಆಧಾರ : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆರು ಜಿಲ್ಲೆಗಳ ಪೈಕಿ ನಾಲ್ಕು ಜಿಲ್ಲೆಗಳಲ್ಲಿ 10,000 ಜನಸಂಖ್ಯೆಗೆ ಲಭ್ಯವಿರುವ ಸರ್ಕಾರಿ ಹಾಸಿಗೆಗಳು 2013–14ರ ಮಟ್ಟಕ್ಕಿಂತ 2020–21ರಲ್ಲಿ ಕಡಿಮೆಯಾಗಿರುವುದನ್ನು ಗಮನಿಸಲಾಯಿತು.

ಕಲ್ಯಾಣ ಕರ್ನಾಟಕ ಪ್ರದೇಶವನ್ನು ಒಳಗೊಂಡಂತೆ ರಾಜ್ಯ ಮಟ್ಟದಲ್ಲಿ ಇಂತಹ ಅಧ್ಯಯನಗಳನ್ನು ಸುಗಮಗೊಳಿಸಲಾಗುತ್ತಿದೆ ಮತ್ತು ವಿಶ್ಲೇಷಿಸಲಾಗುತ್ತಿದೆ ಎಂದು ಮಂಡಳಿಯು ತಿಳಿಸಿತು (ಜುಲೈ 2022). ಮಂಡಳಿಯ ಉತ್ತರವನ್ನು ಸರ್ಕಾರವು ದೃಢೀಕರಿಸಿತು.

ಕಲ್ಯಾಣ ಕರ್ನಾಟಕ ಪ್ರದೇಶದ ಸಮಗ್ರ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಮಂಡಳಿಯನ್ನು ಸ್ಥಾಪಿಸಲಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಆದರೂ ಪ್ರಾದೇಶಿಕ ಅಸಮತೋಲನವನ್ನು ನಿವಾರಿಸಲು ಅಗತ್ಯವಿರುವ ಐಎಮ್‌ಆರ್, ಎಮ್‌ಎಮ್‌ಆರ್ ಮತ್ತು ಕಲ್ಯಾಣ–ಕರ್ನಾಟಕ ಪ್ರದೇಶದ ಆಸ್ಪತ್ರೆಗಳಲ್ಲಿ ಎಫ್‌ಆರ್‌ಯುಎಸ್, ಪಿಹೆಚ್‌ಸಿಗಳು, ವೈದ್ಯರು ಮತ್ತು ಹಾಸಿಗೆಗಳ ಲಭ್ಯತೆಯಂತಹ ಆರೋಗ್ಯ ಸೂಚಕಗಳ ಅಭಿವೃದ್ಧಿಯ ಸ್ಥಿತಿಯನ್ನು ನಿರ್ಣಯಿಸಲು ಮಂಡಳಿಯು ದತ್ತಾಂಶವನ್ನು ಸಂಗ್ರಹಿಸಿರಲಿಲ್ಲ.

## 2.10 ಪೌಷ್ಟಿಕಾಂಶ ಸೂಚ್ಯಂಕಗಳು

ಪೌಷ್ಟಿಕಾಂಶವು ಮಾನವನ ಸಂಪೂರ್ಣ ಜೀವಿತಾವಧಿಯಲ್ಲಿ ಆರೋಗ್ಯ ಮತ್ತು ಅಭಿವೃದ್ಧಿಯ ಮೂಲಭೂತ ಆಧಾರವಾಗಿದೆ. ಅಪೌಷ್ಟಿಕತೆಯ ಪ್ರತಿ ರೂಪವೂ ಸಹ ಮಾನವನ ಆರೋಗ್ಯಕ್ಕೆ ಗಮನಾರ್ಹ ಅಪಾಯವನ್ನು ಉಂಟು ಮಾಡುತ್ತದೆ. ಕರ್ನಾಟಕ 2020–21ರ ಆರ್ಥಿಕ ಸಮೀಕ್ಷೆಯ ಪ್ರಕಾರ, ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಅಪೌಷ್ಟಿಕತೆಯ ಪ್ರಮಾಣ ಅಧಿಕವಾಗಿದೆ. ಆದಾಗ್ಯೂ, ಈ ಪ್ರದೇಶದಲ್ಲಿನ

ಅಪೌಷ್ಠಿಕತೆಗೆ ನಿರ್ದಿಷ್ಟವಾದ ಸೂಚಕಗಳನ್ನು ಸಂಗ್ರಹಿಸಲು ಮಂಡಳಿಯು ಯಾವುದೇ ಕಾರ್ಯವಿಧಾನವನ್ನು ರೂಪಿಸಿರಲಿಲ್ಲ.

ರಾಜ್ಯಾದ್ಯಂತ ರಕ್ತಹೀನತೆ ಹೊಂದಿರುವ ಮಹಿಳೆಯರ ಮತ್ತು ಮಕ್ಕಳ ಶೇಕಡಾವಾರು ಸಂಖ್ಯೆಯು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಅಧಿಕವಾಗಿದ್ದಿತು ಎಂದು ಎನ್ಐಟಿಐ ಆಯೋಗದ ಸೂಚಕಗಳಿಗೆ ಸಂಬಂಧಿಸಿದಂತೆ 2019–21ರ ಕುಟುಂಬ ಆರೋಗ್ಯ ಸಮೀಕ್ಷೆಯ ದತ್ತಾಂಶಗಳ ವಿಶ್ಲೇಷಣೆಯು ತೋರಿಸಿತು.

### *2.10.1 ಮಹಿಳೆಯರಲ್ಲಿ ರಕ್ತಹೀನತೆ*

2015–16 ಮತ್ತು 2019–20ರ ಅವಧಿಯ ಕುಟುಂಬ ಆರೋಗ್ಯ ಸಮೀಕ್ಷೆಯ ಅಂಕಿಅಂಶಗಳ ವಿಶ್ಲೇಷಣೆಯು ಕಲ್ಯಾಣ–ಕರ್ನಾಟಕದ ಪ್ರದೇಶದ ಆರು ಜಿಲ್ಲೆಗಳಲ್ಲಿ ನಾಲ್ಕರಲ್ಲಿ 15–19 ವರ್ಷ ವಯಸ್ಸಿನ ಮಹಿಳೆಯರಲ್ಲಿ ಮತ್ತು ಆರು ಜಿಲ್ಲೆಗಳಲ್ಲಿ ಐದರಲ್ಲಿ 15–49 ವರ್ಷ ವಯಸ್ಸಿನ ಮಹಿಳೆಯಲ್ಲಿ, ಕೆಳಗಿನ **ಕೋಷ್ಟಕ–2.10** ಮತ್ತು **ಕೋಷ್ಟಕ–2.11**ರಲ್ಲಿ ತೋರಿಸಿರುವಂತೆ, ರಕ್ತಹೀನತೆಯು ರಾಜ್ಯದ ಹೆಚ್ಚಳಕ್ಕೆ ಹೋಲಿಸಿದರೆ ಅಧಿಕವಾಗಿತ್ತು:

**ಕೋಷ್ಟಕ–2.10: ಕಲ್ಯಾಣ–ಕರ್ನಾಟಕ ಪ್ರದೇಶ ಮತ್ತು ರಾಜ್ಯದಲ್ಲಿ ರಕ್ತಹೀನತೆ ಇರುವ ಮಹಿಳೆಯರ (15ರಿಂದ 19 ವರ್ಷ) ಶೇಕಡಾವಾರು**

| ಜಿಲ್ಲೆಗಳು | ಎನ್ಎಫ್ಹೆಚ್ಎಸ್–4 (15–16) | ಎನ್ಎಫ್ಹೆಚ್ಎಸ್–5 (19–20) | ವೃದ್ಧಿ (ಶೇಕಡಾವಾರಿನಲ್ಲಿ) |
|---|---|---|---|
| ರಾಯಚೂರು | 62.2 | 64.8 | 2.6 |
| ಯಾದಗಿರಿ | 46.4 | 61.8 | 15.4 |
| ಕಲಬುರಗಿ | 46.6 | 61.4 | 14.8 |
| ಬಳ್ಳಾರಿ | 49.7 | 58.5 | 8.8 |
| ಕೊಪ್ಪಳ | 49.1 | 55.3 | 6.2 |
| ಬೀದರ್ | 49.4 | 51.7 | 2.3 |
| ಕರ್ನಾಟಕ ರಾಜ್ಯ | 45.3 | 49.4 | 4.1 |

ಆಧಾರ: ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ

**ಕೋಷ್ಟಕ–2.11: ಕಲ್ಯಾಣ–ಕರ್ನಾಟಕ ಪ್ರದೇಶ ಮತ್ತು ರಾಜ್ಯದಲ್ಲಿ ರಕ್ತಹೀನತೆ ಇರುವ ಮಹಿಳೆಯರ (15ರಿಂದ 49 ವರ್ಷ) ಶೇಕಡಾವಾರು**

| ಜಿಲ್ಲೆಗಳು | ಎನ್ಎಫ್ಹೆಚ್ಎಸ್–4 (15–16) | ಎನ್ಎಫ್ಹೆಚ್ಎಸ್–5 (19–20) | ವೃದ್ಧಿ (ಶೇಕಡಾವಾರಿನಲ್ಲಿ) |
|---|---|---|---|
| ರಾಯಚೂರು | 62.2 | 64.8 | 2.6 |
| ಯಾದಗಿರಿ | 46.4 | 61.8 | 15.4 |
| ಕಲಬುರಗಿ | 46.6 | 61.4 | 14.8 |
| ಬಳ್ಳಾರಿ | 49.7 | 58.5 | 8.8 |
| ಕೊಪ್ಪಳ | 49.1 | 55.3 | 6.2 |
| ಬೀದರ್ | 49.4 | 51.7 | 2.3 |

ಆಧಾರ: ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ

### *2.10.2 ಮಕ್ಕಳಲ್ಲಿ ಪೌಷ್ಟಿಕಾಂಶತೆ*

ನೀತಿ ಆಯೋಗವು ಪ್ರಾದೇಶಿಕ ಅಸಮಾನತೆಯನ್ನು ನಿರ್ಣಯಿಸಲು ಕಡು–ತೀವ್ರತೆಯ ಅಪೌಷ್ಟಿಕತೆ (ಎಸ್ಎಎಮ್) ಮತ್ತು ಮಧ್ಯಮ–ತೀವ್ರತೆಯ ಅಪೌಷ್ಟಿಕತೆ (ಎಮ್ಎಎಮ್) ಹೊಂದಿರುವ ಮಕ್ಕಳನ್ನು

ಪರಿಗಣಿಸಿತ್ತು. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (2019–21) ವರದಿಯ ಪ್ರಕಾರ ಕರ್ನಾಟಕದಲ್ಲಿ ಶೇಕಡಾ 15.90ರಷ್ಟು ಮಕ್ಕಳು, ಅದರಲ್ಲೂ ವಿಶೇಷವಾಗಿ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಮಾನವರಲ್ಲಿನ ಪ್ರಮುಖ ಕೊರತೆಯಾದ ಅಪೌಷ್ಟಿಕತೆಯ ಕಾರಣದಿಂದಾಗಿ, ರಕ್ತಹೀನತೆಯಿಂದ ಬಳಲುತ್ತಿದ್ದರು. ಮಕ್ಕಳ ಪೌಷ್ಟಿಕತೆಯ ಕೆಲವು ಸೂಚಕಗಳಲ್ಲಿ ಕಲ್ಯಾಣ–ಕರ್ನಾಟಕ ಪ್ರದೇಶದ ಸ್ಥಿತಿಯನ್ನು ಕೆಳಗೆ ಚರ್ಚಿಸಲಾಗಿದೆ.

### ➢ *6ರಿಂದ 59 ತಿಂಗಳ ವಯಸ್ಸಿನ ಮಕ್ಕಳಲ್ಲಿ ರಕ್ತಹೀನತೆ*

ಎನ್‌ಎಫ್‌ಹೆಚ್‌ಎಸ್–4 ಮತ್ತು ಎನ್‌ಎಫ್‌ಹೆಚ್‌ಎಸ್–5ರ ಅವಧಿಯಲ್ಲಿ ರಾಜ್ಯದ ಸರಾಸರಿಗೆ ಹೋಲಿಸಿದರೆ ರಕ್ತಹೀನತೆ ಹೊಂದಿರುವ 6–59 ತಿಂಗಳ ವಯಸ್ಸಿನ ಮಕ್ಕಳ ಶೇಕಡಾವಾರು ಪ್ರಮಾಣವು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಅಧಿಕವಾಗಿತ್ತು. ರಾಜ್ಯಕ್ಕೆ ಹೋಲಿಸಿದರೆ ಈ ಅವಧಿಯಲ್ಲಿ ಕಲ್ಯಾಣ–ಕರ್ನಾಟಕ ಪ್ರದೇಶದಲ್ಲಿ ಮಕ್ಕಳ ರಕ್ತಹೀನತೆ ಕಡಿಮೆಯಿತ್ತಾದರೂ, ಯಾದಗಿರಿ, ಕಲಬುರಗಿ ಮತ್ತು ರಾಯಚೂರು ಜಿಲ್ಲೆಗಳು ರಾಜ್ಯದಲ್ಲಿ ಹೆಚ್ಚಿನ ರಕ್ತಹೀನತೆಯ ಮೊದಲ ಮೂರು ಸ್ಥಾನದಲ್ಲಿದ್ದು, ಕೊಪ್ಪಳ ಮತ್ತು ಬೀದರ್ ಜಿಲ್ಲೆಗಳು, ಕೆಳಗಿನ **ಕೋಷ್ಟಕ–2.12**ರಲ್ಲಿ ವಿವರಿಸಿದಂತೆ, ಎನ್‌ಎಫ್‌ಹೆಚ್‌ಎಸ್–5 ದತ್ತಾಂಶದಲ್ಲಿ 5 ಮತ್ತು 8ನೇ ಸ್ಥಾನದಲ್ಲಿದ್ದವು.

**ಕೋಷ್ಟಕ–2.12: 6ರಿಂದ 59 ತಿಂಗಳ ವಯಸ್ಸಿನ ಮಕ್ಕಳಲ್ಲಿ ರಕ್ತಹೀನತೆ**


| ಜಿಲ್ಲೆ | ಎನ್‌ಎಫ್‌ಹೆಚ್‌ಎಸ್–4 (15–16) | ಎನ್‌ಎಫ್‌ಹೆಚ್‌ಎಸ್–5 (19–20) | ಬದಲಾವಣೆ |
|---|---|---|---|
| ಯಾದಗಿರಿ | 74 | 76 | 2 |
| ಕಲಬುರಗಿ | 72.4 | 75.1 | 2.7 |
| ರಾಯಚೂರು | 70.6 | 73.6 | 3 |
| ಕೊಪ್ಪಳ | 68.1 | 70.7 | 2.6 |
| ಬೀದರ್ | 69.1 | 69.3 | 0.2 |
| ಬಳ್ಳಾರಿ | 72.3 | 67.5 | –4.8 |

ಆಧಾರ: ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ

### ➢ *ಮಕ್ಕಳ ಎತ್ತರ ಕುಂಠಿತವಾಗಿರುವುದು ಮತ್ತು ಕ್ಷೀಣಸುವಿಕೆ*

ಕೆಳಗಿನ **ನಕ್ಷೆ–2.12**ರಲ್ಲಿ ತೋರಿಸಿರುವಂತೆ ರಾಜ್ಯದ ಉಳಿದ ಭಾಗಗಳಿಗೆ ಹೋಲಿಸಿದರೆ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಮಕ್ಕಳ ಕುಂಠಿತ ಮತ್ತು ಕ್ಷೀಣಿಸುವಿಕೆಯ ಹೆಚ್ಚಿನ ಪ್ರಮಾಣದಲ್ಲಿತ್ತು:

**ನಕ್ಷೆ–2.12: ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಮಕ್ಕಳ ಕುಂಠಿತ ಮತ್ತು ಕ್ಷೀಣಸುವಿಕೆಯ ಶೇಕಡಾವಾರಿನ ಹೋಲಿಕೆ**




ಆಧಾರ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಮಂಡಳಿಯು ಕಲ್ಯಾಣ–ಕರ್ನಾಟಕ ಪ್ರದೇಶದಲ್ಲಿನ ಅಪೌಷ್ಟಿಕ ಮಕ್ಕಳ ಶೇಕಡಾವಾರು ದತ್ತಾಂಶವನ್ನು ಸಂಗ್ರಹಿಸಿರಲಿಲ್ಲ ಅಥವಾ ಅಪೌಷ್ಟಿಕ ಮಕ್ಕಳ ಅಸಮತೋಲನವನ್ನು ನಿವಾರಿಸಲು ಯಾವುದೇ ಪೌಷ್ಟಿಕಾಂಶದ ಕಾರ್ಯಕ್ರಮಗಳನ್ನು ಕೈಗೊಂಡಿರಲಿಲ್ಲ. ಬದಲಿಗೆ ಕಟ್ಟಡ ನಿರ್ಮಾಣಕ್ಕೆ ಮಾತ್ರ ಹಣವನ್ನು ಬಿಡುಗಡೆ ಮಾಡಲಾಗಿತ್ತು. ಪೌಷ್ಟಿಕಾಂಶವನ್ನು ಸುಧಾರಿಸಲು ಮತ್ತು ವಿಶೇಷವಾಗಿ ಬಾಲ್ಯದಲ್ಲಿ ಮಕ್ಕಳಲ್ಲಿ ರೋಗಗಳನ್ನು ಕಡಿಮೆ ಮಾಡಲು ಕ್ರಮಗಳನ್ನು ಅಳವಡಿಸಿಕೊಳ್ಳಲು ಮಕ್ಕಳಲ್ಲಿ ಅಪೌಷ್ಟಿಕತೆಯ ಕಾರಣಗಳನ್ನು ನಿರ್ಣಯಿಸಿರಲಿಲ್ಲ. ಇದು ಸುಧಾರಿತ ಬುದ್ಧಿಶಕ್ತಿಯ ಬೆಳವಣಿಗೆಗೆ ಕಾರಣವಾಗಿ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಿ ಮತ್ತು ಆರ್ಥಿಕ ಬೆಳವಣಿಗೆಯನ್ನು ಖಚಿತಪಡಿಸುತ್ತಿತ್ತು.

## 2.11 ಶಿಕ್ಷಣ ಸೂಚ್ಯಂಕಗಳು

### *2.11.1 ಉನ್ನತ ಶಿಕ್ಷಣ ಮೂಲಸೌಕರ್ಯಗಳ ಗುಣಮಟ್ಟ*

ಉನ್ನತ ಶಿಕ್ಷಣ ಸಂಸ್ಥೆಗಳ ಗುಣಮಟ್ಟವು ಉನ್ನತ ಶಿಕ್ಷಣ ಮತ್ತು ಪ್ರಾದೇಶಿಕ ಅಭಿವೃದ್ಧಿಯ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶಗಳಾಗಿವೆ. ಅಧ್ಯಾಪಕರ ಗುಣಮಟ್ಟ, ಪಠ್ಯಕ್ರಮದ ಮಾನದಂಡಗಳು, ಲಭ್ಯವಿರುವ ತಾಂತ್ರಿಕ ಮೂಲಸೌಕರ್ಯ, ಸಂಶೋಧನಾ ಪರಿಸರ, ಮಾನ್ಯತೆ ಪಡೆದುಕೊಳ್ಳುವುದು, ಆಡಳಿತ ನೀತಿಗಳು, ಹಣಕಾಸು, ಮೌಲ್ಯಮಾಪನ ಮತ್ತು ಉತ್ತಮ ಆಡಳಿತ, ಇವುಗಳು ಉನ್ನತ ಶಿಕ್ಷಣದ ಗುಣಮಟ್ಟದ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶಗಳಾಗಿವೆ. ನ್ಯಾಷನಲ್ ಬೋರ್ಡ್ ಆಫ್ ಅಕ್ರೆಡಿಟೇಶನ್ (ಎನ್‌ಬಿಎ) ಮತ್ತು ನ್ಯಾಷನಲ್ ಅಸೆಸ್‌ಮೆಂಟ್ ಮತ್ತು ಅಕ್ರೆಡಿಟೇಶನ್ ಕೌನ್ಸಿಲ್ (ಎನ್‌ಎಎಸಿ) ಭಾರತದಲ್ಲಿನ ಉನ್ನತ ಶಿಕ್ಷಣ ಸಂಸ್ಥೆಗಳ ಮಾನ್ಯತೆಗೆ ಜವಾಬ್ದಾರರಾಗಿರುವ ಎರಡು ಪ್ರಮುಖ ಸಂಸ್ಥೆಗಳಾಗಿವೆ.

ಮಾನ್ಯತೆ ಪಡೆದ ಸಂಸ್ಥೆಗಳ ಸಂಖ್ಯೆಯ ವಿಶ್ಲೇಷಣೆಯು ಮಾನ್ಯತೆ ಪಡೆದ ಉನ್ನತ ಶಿಕ್ಷಣ ಸಂಸ್ಥೆಗಳ ಸಂಖ್ಯೆಯ ದೃಷ್ಟಿಯಿಂದ ಕಲ್ಯಾಣ ಕರ್ನಾಟಕ ಪ್ರದೇಶವು ರಾಜ್ಯದ ಉಳಿದ ಪ್ರದೇಶಗಳಿಗಿಂತ ಹಿಂದುಳಿದಿತ್ತು ಎಂಬುದನ್ನು ತೋರಿಸಿತು.

### *2.11.2 ವಿದ್ಯಾರ್ಥಿಗಳ ಪರಿವರ್ತನಾ ದರ*

ಪ್ರಾಥಮಿಕ ಮತ್ತು ಮುಂದುವರಿದ ಶಿಕ್ಷಣಕ್ಕೆ ದಾಖಲಾದ ವಿದ್ಯಾರ್ಥಿಗಳ ಪ್ರಮಾಣವು ಉನ್ನತ ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕದಿಂದ ಮಾಧ್ಯಮಿಕವರೆಗಿನ ಶಿಕ್ಷಣದ ಸಾರ್ವತ್ರೀಕರಣದ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (ಎಸ್‌ಡಿಜಿ) ಅಳೆಯುವ ಸೂಚಕಗಳಲ್ಲಿ ಒಂದಾಗಿರುವುದಲ್ಲದೇ ಎನ್‌ಐಟಿಐ ಆಯೋಗದ ಪ್ರಮುಖ ಕಾರ್ಯಕ್ಷಮತೆ ಸೂಚಕವೂ ಆಗಿದೆ.

2014–15 ಮತ್ತು 2020–21ರ ಅವಧಿಗೆ ಪ್ರಾಥಮಿಕದಿಂದ (I ರಿಂದ V) ಉನ್ನತ ಪ್ರಾಥಮಿಕ (VI ರಿಂದ VIII) ಮತ್ತು ಉನ್ನತ ಪ್ರಾಥಮಿಕದಿಂದ ಮಾಧ್ಯಮಿಕ ಹಂತಕ್ಕೆ (IX–X) ದಾಖಲಾದ ವಿದ್ಯಾರ್ಥಿಗಳ ಪರಿವರ್ತನಾ ದರವನ್ನು ಲೆಕ್ಕಪರಿಶೋಧನೆಯು ವಿಶ್ಲೇಷಿಸಿತು.

**ಕೋಷ್ಟಕ–2.13: ಕಲ್ಯಾಣ–ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳ ಪರಿವರ್ತನಾ ದರ**

| ಜಿಲ್ಲೆ | ಪ್ರಾಥಮಿಕದಿಂದ ಉನ್ನತ ಪ್ರಾಥಮಿಕ | | ಉನ್ನತ ಪ್ರಾಥಮಿಕದಿಂದ ಮಾಧ್ಯಮಿಕ | |
|---|---|---|---|---|
| | 2014–15 | 2020–21 | 2014–15 | 2020–21 |
| ಬೀದರ್ | 84.64 | 96.67 | 86.79 | 94.76 |
| ರಾಯಚೂರು | 93.85 | 97.47 | 84.20 | 95.43 |
| ಯಾದಗಿರಿ | 96.05 | 97.42 | 85.81 | 92.17 |
| ಕಲಬುರಗಿ | 96.00 | 96.24 | 87.52 | 93.30 |
| ಕೊಪ್ಪಳ | 98.74 | 98.16 | 93.51 | 95.60 |
| ಬಳ್ಳಾರಿ | 102.06 | 100.25 | 85.21 | 95.28 |
| **ರಾಜ್ಯ ಸರಾಸರಿ** | **96.95** | **98.95** | **95.55** | **97.84** |

ಆಧಾರ: ಆರೋಗ್ಯ ಇಲಾಖೆ (ಡಿಪಿಐ)

ಮೇಲಿನ ಕೋಷ್ಟಕದಿಂದ ಗಮನಿಸಿದಂತೆ ಕಲ್ಯಾಣ–ಕರ್ನಾಟಕ ಪ್ರದೇಶದೊಳಗೆ ಪ್ರಾಥಮಿಕದಿಂದ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಮತ್ತು ಹಿರಿಯ ಪ್ರಾಥಮಿಕದಿಂದ ಪ್ರೌಢಶಾಲೆಗಳಿಗೆ ವಿದ್ಯಾರ್ಥಿಗಳ ಪರಿವರ್ತನಾ ಪ್ರಮಾಣವು ಹೆಚ್ಚಿದ್ದರೂ, ಜಿಲ್ಲೆಗಳು, ಈ ಕೆಳಗೆ ಸೂಚಿಸಿದಂತೆ, ರಾಜ್ಯಕ್ಕಿಂತ ಹಿಂದುಳಿದಿದ್ದವು:


**ಪರಿವರ್ತನಾ ದರ– ಪ್ರಾಥಮಿಕದಿಂದ ಉನ್ನತ ಪ್ರಾಥಮಿಕ:** 2014–15ರ ಅವಧಿಯಲ್ಲಿ ಕಲ್ಯಾಣ–ಕರ್ನಾಟಕ ಪ್ರದೇಶದ 4 ಜಿಲ್ಲೆಗಳು ರಾಜ್ಯದ ಸರಾಸರಿಗಿಂತ ಹಿಂದುಳಿದಿದ್ದರೆ, 2020–21ರ ಅವಧಿಯಲ್ಲಿ ಕಲ್ಯಾಣ–ಕರ್ನಾಟಕ ಪ್ರದೇಶದ 5 ಜಿಲ್ಲೆಗಳು ರಾಜ್ಯದ ಸರಾಸರಿಗಿಂತ ಹಿಂದುಳಿದಿದ್ದವು.

**ಪರಿವರ್ತನಾ ದರ– ಉನ್ನತ ಪ್ರಾಥಮಿಕದಿಂದ ಮಾಧ್ಯಮಿಕ:** ಕಲ್ಯಾಣ–ಕರ್ನಾಟಕ ಪ್ರದೇಶದ ಎಲ್ಲಾ ಜಿಲ್ಲೆಗಳು 2014–15ರ ಅವಧಿಯಲ್ಲಿ ಹಾಗೂ 2020–21ರ ಅವಧಿಯಲ್ಲಿ ರಾಜ್ಯದ ಸರಾಸರಿಗಿಂತ ಹಿಂದುಳಿದಿದ್ದವು.

### *2.11.3 ಉನ್ನತ ಶಿಕ್ಷಣದಲ್ಲಿನ ಒಟ್ಟು ದಾಖಲಾತಿ ಅನುಪಾತ*

ಕರ್ನಾಟಕ ಉನ್ನತ ಶಿಕ್ಷಣ ದೃಷ್ಟಿಕೋನವು ಒಟ್ಟು ದಾಖಲಾತಿ ಅನುಪಾತವು[5] 2012–13ರಲ್ಲಿನ (ಜಿಇಆರ್) ಶೇಕಡಾ 18ರಿಂದ 2019–20ರಲ್ಲಿನ ಶೇಕಡಾ 35ಕ್ಕೆ ಹೆಚ್ಚಾಗಲಿದೆ ಎಂದು ಅಂದಾಜಿಸಿತ್ತು. ವರದಿಗಳ ಪ್ರಕಾರ ರಾಜ್ಯದಲ್ಲಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ 2020ರ ವೇಳೆಗೆ ಜಿಇಆರ್ ಶೇಕಡಾ 32ರಷ್ಟಿತ್ತು. ಆದಾಗ್ಯೂ, ಕಲ್ಯಾಣ–ಕರ್ನಾಟಕದ ಎಲ್ಲಾ ಜಿಲ್ಲೆಗಳ ಜಿಇಆರ್ ರಾಜ್ಯದ ಸರಾಸರಿಗಿಂತ ಕಡಿಮೆಯಿರುವುದನ್ನು ಗಮನಿಸಲಾಯಿತು. 2013–14 ಮತ್ತು 2019–20ರ ನಡುವಿನ ಜಿಇಆರ್ ಸ್ಥಿತಿಯನ್ನು **ನಕ್ಷೆ–2.13ರಲ್ಲಿ** ನೀಡಲಾಗಿದೆ:

**ನಕ್ಷೆ–2.13: ಉನ್ನತ ಶಿಕ್ಷಣದಲ್ಲಿ 2013–20ರ ಅವಧಿಯಲ್ಲಿ ರಾಜ್ಯದಲ್ಲಿ ಒಟ್ಟು ದಾಖಲಾತಿ ಅನುಪಾತ**




**2013–14** **2019–20**

### *2.11.4 ವಿದ್ಯಾರ್ಥಿಗಳಲ್ಲಿ ಮಾಧ್ಯಮಿಕ ಹಂತದಲ್ಲಿ ಕಲಿಕೆಯ ಫಲಿತಾಂಶಗಳು*


ಶಾಲೆಗಳಲ್ಲಿ ಪರಿಚಯಿಸಲಾದ ನಿರಂತರ ಸಮಗ್ರ ಮೌಲ್ಯಮಾಪನ (ಸಿಸಿಇ) ವ್ಯವಸ್ಥೆಯು ಶಾಲೆಗಳಲ್ಲಿ ತರಗತಿಗೆ ಸೂಕ್ತವಾದ ಕಲಿಕಾ ಫಲಿತಾಂಶಗಳನ್ನು ಖಚಿತಪಡಿಸುತ್ತದೆ. ಶಾಲೆಗಳಲ್ಲಿ ಮಕ್ಕಳ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡಲು ಎನ್‌ಐಟಿಐ ಆಯೋಗವು ಈ ಉಪ–ಸೂಚಕವನ್ನು ಅಳವಡಿಸಿಕೊಂಡಿತ್ತು ಮತ್ತು ಇದರಿಂದಾಗಿ ಅಂತರವನ್ನು ಗುರುತಿಸಿ ಸಮಯಕ್ಕೆ ಸರಿಯಾಗಿ ಸುಧಾರಣೆ

[5] ಜಿಇಆರ್ ಎನ್ನುವುದು ಸಂಖ್ಯಾಶಾಸ್ತ್ರದ ಅಳತೆಯಾಗಿದ್ದು, ವಿವಿಧ ಹಂತದ ಶಿಕ್ಷಣದಲ್ಲಿ ದಾಖಲಾದ ವಿದ್ಯಾರ್ಥಿಗಳ ಶೇಕಡಾವಾರು ಪ್ರಮಾಣವನ್ನು, ಅವರ ಅನುಗುಣವಾದ ವಯಸ್ಸಿನ ಒಟ್ಟು ಜನಸಂಖ್ಯೆಯಿಂದ ನಿರ್ಧರಿಸಲು ಬಳಸಲಾಗುತ್ತದೆ.

ಮಾಡಬಹುದಿತ್ತು. ಕಲಿಕಾ ಫಲಿತಾಂಶಗಳನ್ನು ಸುಧಾರಿಸಲು ಶಿಕ್ಷಕರ ಹೊಣೆಗಾರಿಕೆಯನ್ನು ಖಚಿತಪಡಿಸುವುದು ಮತ್ತು ಶಿಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು ಮೊದಲ ಆದ್ಯತೆಯಾಗಿತ್ತು. ಉತ್ತಮ ಕಲಿಕಾ ಫಲಿತಾಂಶಗಳು ಮಕ್ಕಳನ್ನು ತಮ್ಮ ತರಗತಿಗಳಲ್ಲಿ ಉಳಿಸಿಕೊಳ್ಳಲು ಶಾಲೆಗಳಿಗೆ ಅನುವು ಮಾಡಿಕೊಡುತ್ತದೆ.

ಎನ್ಐಟಿಐ ಆಯೋಗದ ಸೂಚಕಗಳು ಅಳವಡಿಸಿಕೊಂಡ ವಿದ್ಯಾರ್ಥಿಗಳ ಕಲಿಕಾ ಫಲಿತಾಂಶಗಳನ್ನು ಮೌಲ್ಯಮಾಪನ ಮಾಡಲು ಸಾರ್ವಜನಿಕ ಶಿಕ್ಷಣ ಇಲಾಖೆಯು ದತ್ತಾಂಶವನ್ನು ನಿರ್ವಹಿಸಿರಲಿಲ್ಲ. ಕರ್ನಾಟಕ ರಾಜ್ಯ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ (ಕೆಎಸ್ಎಸ್ಇಬಿ) ನಿರ್ವಹಿಸುತ್ತಿರುವ 10ನೇ ತರಗತಿಯ ವಿದ್ಯಾರ್ಥಿಗಳ ಕಲಿಕಾ ಫಲಿತಾಂಶಗಳ ಜಿಲ್ಲಾವಾರು ದತ್ತಾಂಶವನ್ನು ಲೆಕ್ಕಪರಿಶೋಧನೆಯು ವಿಶ್ಲೇಷಿಸಿತು. ಕಲ್ಯಾಣ–ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳ ಶೇಕಡಾವಾರು ಉತ್ತೀರ್ಣತೆಯು 2014–15ರಿಂದ 2020–21ರ ಅವಧಿಯಲ್ಲಿ ಕುಸಿದಿರುವುದನ್ನು ಮತ್ತು ಈ ವರ್ಷಗಳಲ್ಲಿ ಯಾದಗಿರಿ ಜಿಲ್ಲೆಯ ಶೇಕಡಾ ಉತ್ತೀರ್ಣತೆಯು, **ನಕ್ಷೆ–2.14**ರಲ್ಲಿ ತೋರಿಸಿರುವಂತೆ, ಕನಿಷ್ಠ ಮಟ್ಟಕ್ಕೆ ಕುಸಿದಿರುವುದನ್ನು ವಿಶ್ಲೇಷಣೆಯು ತಿಳಿಯಪಡಿಸಿತು:

**ನಕ್ಷೆ–2.14: ಕಲ್ಯಾಣ–ಕರ್ನಾಟಕ ಪ್ರದೇಶದಲ್ಲಿ ಪ್ರೌಢಶಿಕ್ಷಣ ಪರೀಕ್ಷಾ ಮಟ್ಟದಲ್ಲಿನ ಉತ್ತೀರ್ಣತೆಯ ಶೇಕಡಾವಾರಿನ ವಿಶ್ಲೇಷಣೆ**




ಆಧಾರ: ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಒದಗಿಸಿದ ಮಾಹಿತಿ

ಆದಾಗ್ಯೂ, ಮಂಡಳಿಯು ದತ್ತಾಂಶವನ್ನು ಸಂಗ್ರಹಿಸಿ ಶಿಕ್ಷಣ ಕ್ಷೇತ್ರದಲ್ಲಿ ಕಲ್ಯಾಣ–ಕರ್ನಾಟಕ ಪ್ರದೇಶದ ಸ್ಥಿತಿಯನ್ನು ವಿಶ್ಲೇಷಿಸಿ ಸಂಬಂಧಪಟ್ಟ ಇಲಾಖೆಯ ಸಮನ್ವಯದೊಂದಿಗೆ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ಸುಧಾರಿಸಲು ಕ್ರಮಗಳನ್ನು ಕೈಗೊಳ್ಳಬೇಕಿದೆ.

### *2.11.5 ಕಲ್ಯಾಣ–ಕರ್ನಾಟಕ ಪ್ರದೇಶದ ಶಿಕ್ಷಣ ಸಂಸ್ಥೆಗಳಲ್ಲಿನ ಸೌಲಭ್ಯಗಳಲ್ಲಿ ಕೊರತೆಗಳು*

ಡಾ.ನಂಜುಂಡಪ್ಪ ಸಮಿತಿಯು ಸಂಸ್ಥೆಗಳ ಸಂಖ್ಯೆ, ಪ್ರವೇಶ ಸಂಭಾವ್ಯತೆ ಮತ್ತು ಕೈಗೆಟುಕುವ ಸಾಮರ್ಥ್ಯವನ್ನು ಪ್ರದೇಶದ ಡೈನಾಮಿಕ್ಸ್‌ನಲ್ಲಿ ಪ್ರಮುಖ ಚರಾಂಶಗಳಿಗಿ ಪರಿಗಣಿಸಿತ್ತು. ಮಂಡಳಿಯು ವಿವಿಧ ವಲಯಗಳಲ್ಲಿನ ಮೂಲಸೌಕರ್ಯದ ಕೊರತೆಗಳನ್ನು ವಿಶ್ಲೇಷಿಸಲು ಮತ್ತು ಅವುಗಳನ್ನು ಪರಿಹರಿಸಲು ಕ್ರಮಗಳನ್ನು ಕೈಗೊಳ್ಳುವುದೆಂದು ನಿರೀಕ್ಷಿಸಲಾಗಿತ್ತು. ಆದರೆ, ಅಂತಹ ಯಾವುದೇ ನ್ಯೂನತೆಗಳ ವಿಶ್ಲೇಷಣೆಯನ್ನು ಮಂಡಳಿಯು ಕೈಗೊಂಡಿರಲಿಲ್ಲ ಎಂಬುದನ್ನು ಗಮನಿಸಲಾಯಿತು.

ಕ್ಷೇತ್ರಭೇಟಿಗಳ ಸಂದರ್ಭಗಳಲ್ಲಿ ಕೆಳಗಿನ **ಪ್ರದರ್ಶಿಕೆ–2.1ರಲ್ಲಿ** ತೋರಿಸಿದಂತೆ, ಶೈಕ್ಷಣಿಕ ಸಂಸ್ಥೆಗಳ ಮೂಲಸೌಕರ್ಯಗಳಲ್ಲಿ ಲೆಕ್ಕಪರಿಶೋಧನೆಯು ನ್ಯೂನತೆಗಳನ್ನು ಗಮನಿಸಿತು.

***ಸಾಕಷ್ಟು ತರಗತಿ ಕೊಠಡಿಗಳು ಮತ್ತು ಮೂಲಸೌಕರ್ಯಗಳ ಅಲಭ್ಯತೆ***

*ಸಮರ್ಪಕವಾದ ಮೂಲಸೌಕರ್ಯದೊಂದಿಗೆ ಸಾಕಷ್ಟು ಸಂಖ್ಯೆಯ ಕೊಠಡಿಗಳನ್ನು ಹೊಂದಿರುವುದು ಪ್ರತಿ ಶಾಲೆಗೆ ಅತ್ಯಗತ್ಯ ಅವಶ್ಯಕತೆಯಾಗಿದೆ. ಗಣನೀಯ ಹೂಡಿಕೆಗಳ ಹೊರತಾಗಿಯೂ, **ಪ್ರದರ್ಶಿಕೆ–2.1ರಲ್ಲಿ** ತೋರಿಸಿರುವಂತೆ, ಕಲ್ಯಾಣ-ಕರ್ನಾಟಕ ಪ್ರದೇಶದ ಶಾಲೆಗಳಲ್ಲಿ ಮೂಲಸೌಕರ್ಯದಲ್ಲಿನ ಕೊರತೆಯನ್ನು ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ ಲೆಕ್ಕಪರಿಶೋಧನೆಯು ಗಮನಿಸಿತು.*

**ಪ್ರದರ್ಶಿಕೆ–2.1**





ಯಾದಗಿರಿಯ ದುಪ್ಪಳ್ಳಿ



ಯಾದಗಿರಿಯ ಹಟ್ಟಿಕುಣಿ

ಆಧಾರ: ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ ತೆಗೆದ ಛಾಯಾಚಿತ್ರಗಳು

ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯತೆಯಲ್ಲಿನ ಅಂತರವನ್ನು ವಿಶ್ಲೇಷಿಸಲು ನಿರ್ಗಮನ ಸಭೆಯಲ್ಲಿ ಸರ್ಕಾರವು ಒಪ್ಪಿಕೊಂಡಿತು (ಜೂನ್ 2022).

## 2.12 ಸಾಕ್ಷರತಾ ಪ್ರಮಾಣ

ಸಾಕ್ಷರತಾ ಪ್ರಮಾಣವು ಶೈಕ್ಷಣಿಕ ಅಭಿವೃದ್ಧಿಗೆ ಬಳಸುವ ಸಾಮಾನ್ಯ ಸೂಚಕವಾಗಿದೆ. ಇಲಾಖೆಗೆ ಸಂಬಂಧಿಸಿದ ಗೃಹ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿಯು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿನ ಸಾಕ್ಷರತೆಯ ಮಟ್ಟದಲ್ಲಿನ ಅಂತರವನ್ನು ಸಂವಿಧಾನದ (ನೂರ ಹದಿನೆಂಟನೇ ತಿದ್ದುಪಡಿ) ಮಸೂದೆ, 2012ರಲ್ಲಿ ಪರಿಗಣಿಸಿತ್ತು. 371ಡಿ ವಿಧಿಯನ್ನು ಪರಿಚಯಿಸಿದ ನಂತರ, ತೆಲಂಗಾಣ ಪ್ರದೇಶವು ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ವಿಶೇಷ ಅವಕಾಶಗಳ ಕಾರಣದಿಂದಾಗಿ ಸಾಕ್ಷರತೆ ಮತ್ತು ಉದ್ಯೋಗದಲ್ಲಿ ಉತ್ತಮ ಸ್ಥಾನವನ್ನು ಪಡೆಯಲು ಸಾಧ್ಯವಾಯಿತು ಎಂದು ಸಮಿತಿಯು ಗಮನಿಸಿತು.

ಸಮಿತಿಯು ಈ ಕೆಳಗಿನವುಗಳನ್ನೂ ಕೂಡ ಪರಿಗಣಿಸಿತ್ತು:

- 2001ರ ಜನಗಣತಿಯ ಪ್ರಕಾರ ರಾಷ್ಟ್ರೀಯ ಸರಾಸರಿ ಶೇಕಡಾ 65.37 ಮತ್ತು ರಾಜ್ಯದ ಸರಾಸರಿ ಶೇಕಡಾ 67ಕ್ಕೆ ಪ್ರತಿಯಾಗಿ ಕಲ್ಯಾಣ ಕರ್ನಾಟಕ ಪ್ರದೇಶದ ಸಾಕ್ಷರತೆಯ ಪ್ರಮಾಣವು ಕೇವಲ ಶೇಕಡಾ 54.24 ರಷ್ಟಿತ್ತು
- ಸಾಕ್ಷರತೆಯ ದರದಲ್ಲಿ ಲಿಂಗ ಅಂತರವು ರಾಜ್ಯದಲ್ಲಿನ ಶೇಕಡಾ 20ಕ್ಕೆ ಹೋಲಿಸಿದರೆ ಶೇಕಡಾ 25ರಷ್ಟಿತ್ತು

ಏಳು ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಜನಸಂಖ್ಯೆಯ ಸಾಕ್ಷರತೆಯ ಪ್ರಮಾಣವು 1991ರಲ್ಲಿನ ಶೇಕಡಾ 56.04ರಿಂದ 2001ರ ಜನಗಣತಿಯಲ್ಲಿ ಶೇಕಡಾ 67ಕ್ಕೆ ಮತ್ತು 2011ರಲ್ಲಿ ಶೇಕಡಾ 75.60ಕ್ಕೆ ಏರಿ ಶೇಕಡಾ 19.56ರಷ್ಟು ಸುಧಾರಣೆಯಾಗಿತ್ತು. 371–ಜೆ ವಿಧಿಯನ್ನು ಪರಿಚಯಿಸಿದಾಗಿನಿಂದ ಈ ಪ್ರದೇಶದಲ್ಲಿ ಮಧ್ಯಸ್ಥಿಕೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸಾಕ್ಷರತೆಯ ಮಟ್ಟದಲ್ಲಿನ ಸುಧಾರಣೆಯನ್ನು ಮಂಡಳಿಯು ಖಚಿತಪಡಿಸಿಕೊಂಡಿರಲಿಲ್ಲ.


ಆರು ಜಿಲ್ಲೆಗಳಲ್ಲಿ ಸಾಕ್ಷರತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ವಾಸ್ತವಿಕ ದತ್ತಾಂಶವನ್ನು ಪಡೆಯದೆ ಮಂಡಳಿಯು ₹1.49 ಕೋಟಿ ಮೊತ್ತವನ್ನು ಸಮೂಹ ಶಿಕ್ಷಣ ನಿರ್ದೇಶನಾಲಯಕ್ಕೆ ನೀಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದರಲ್ಲಿ ₹93.50 ಲಕ್ಷ ಮಾತ್ರ ಬಳಕೆಯಾಗಿದ್ದು ಬಾಕಿ ಹಣ ನಿರ್ದೇಶನಾಲಯದ ಬಳಿ ಖರ್ಚಾಗದೇ ಉಳಿದುಕೊಂಡಿತ್ತು.

### ❖ *ಸಾಕ್ಷತೆಯಲ್ಲಿ ಲಿಂಗ ಅಂತರ*

ಸಾಕ್ಷರತೆಯು ಸಮಾಜದ ಅಭಿವೃದ್ಧಿಯ ಪ್ರಮುಖ ಸೂಚಕಗಳಲ್ಲಿ ಒಂದಾಗಿದೆ ಮತ್ತು ವ್ಯಕ್ತಿಗಳ ಒಟ್ಟಾರೆ ಅಭಿವೃದ್ಧಿಗೆ ಪ್ರಮುಖ ಹೂಡುವಳಿಯನ್ನು ರೂಪಿಸುತ್ತದೆ. ಸಾಕ್ಷರತೆಯಲ್ಲಿನ ಲಿಂಗ ಅಂತರವು ಉದ್ಯೋಗದಲ್ಲಿ ಮಹಿಳೆಯರು ಭಾಗವಹಿಸುವುದನ್ನು ತಡೆದು ಸಮಾಜದ ಅಭಿವೃದ್ಧಿಗೆ ಅಡ್ಡಿಪಡಿಸುತ್ತದೆ.

**ನಕ್ಷೆ–2.15**ರಲ್ಲಿ ತೋರಿಸಿದಂತೆ ಮಹಿಳಾ ಸಾಕ್ಷರತೆಯ ಹೆಚ್ಚಳದ ಹೊರತಾಗಿಯೂ, ರಾಜ್ಯದಾದ್ಯಂತ ಪ್ರತಿ ಜಿಲ್ಲೆಯಲ್ಲೂ ಸಾಕ್ಷರತೆಯಲ್ಲಿ ಲಿಂಗ ಅಂತರವು ಮುಂದುವರಿದಿತ್ತು ಮತ್ತು ಅದು ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಹೆಚ್ಚಾಗಿರುವುದನ್ನು ಸಾಮೂಹಿಕ ಶಿಕ್ಷಣ ಇಲಾಖೆಯಲ್ಲಿ 2021 ರವರೆಗಿನ ಸಾಕ್ಷರತಾ ಪ್ರಮಾಣಗಳ ವಿಶ್ಲೇಷಣೆಯು ತಿಳಿಯಪಡಿಸಿತು.

**ನಕ್ಷೆ–2.15: ಕಲ್ಯಾಣ–ಕರ್ನಾಟಕ ಪ್ರದೇಶ ಮತ್ತು ರಾಜ್ಯದಲ್ಲಿ ಸಾಕ್ಷರತೆಯಲ್ಲಿ ಲಿಂಗಭೇದ**




ಆಧಾರ: ಸಮೂಹ ಶಿಕ್ಷಣ ಇಲಾಖೆ

### ❖ *ಸಾಕ್ಷರತಾ ದರ*


2011 ರಿಂದ 2021ರ ಅವಧಿಯಲ್ಲಿ ಮಂಡಳಿ ಅಥವಾ ಸಮೂಹ ಶಿಕ್ಷಣ ಇಲಾಖೆಯು ಜಿಲ್ಲಾವಾರು, ತಾಲ್ಲೂಕುವಾರು, ಲಿಂಗವಾರು ಅಥವಾ ಸಾಮಾಜಿಕ ಸಮುದಾಯವಾರು ಸಾಕ್ಷರತೆಯ ಮಟ್ಟದ

ದತ್ತಾಂಶವನ್ನು ಸಂಗ್ರಹಿಸಿರಲಿಲ್ಲ. ಹೀಗೆ, ಸಾಕ್ಷರತಾ ಪ್ರಮಾಣವನ್ನು ಸುಧಾರಿಸುವುದಕ್ಕೆ ಸಂಬಂಧಿಸಿದಂತೆ ಮಂಡಳಿಯು ಯಾವುದೇ ಸಮುದಾಯ ನಿರ್ದಿಷ್ಟ ಮಧ್ಯಸ್ಥಿಕೆಗಳನ್ನು ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ.

❖ ***ಮಹಿಳೆಯರಲ್ಲಿ ಸಾಕ್ಷರತಾ ದರ***

ಕಲ್ಯಾಣ–ಕರ್ನಾಟಕ ಪ್ರದೇಶದ ಐದು ಜಿಲ್ಲೆಗಳಲ್ಲಿ ಸಾಕ್ಷರತಾ ಮಹಿಳೆಯರ ಶೇಕಡಾವಾರು ಪ್ರಮಾಣವು ಕಡಿಮೆಯಿದ್ದಿತು ಮತ್ತು ಅವುಗಳಲ್ಲಿ ಕನಿಷ್ಠ ಪ್ರಮಾಣವಿದ್ದ ಮೂರು ಜಿಲ್ಲೆಗಳಲ್ಲಿ ರಾಜ್ಯದ ಸರಾಸರಿ ಶೇಕಡಾ 73.4ಕ್ಕೆ ಪ್ರತಿಯಾಗಿ 10ಕ್ಕಿಂತ ಹೆಚ್ಚು ವ್ಯತ್ಯಾಸವನ್ನು ಹೊಂದಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕಲ್ಯಾಣ–ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿನ ಮಹಿಳಾ ಸಾಕ್ಷರತೆಯ ದರವನ್ನು ರಾಜ್ಯದೊಂದಿಗೆ ಹೋಲಿಕೆ ಮಾಡಿ **ನಕ್ಷೆ–2.16**ರಲ್ಲಿ ತೋರಿಸಲಾಗಿದೆ


**ನಕ್ಷೆ–2.16: ರಾಜ್ಯದೊಂದಿಗೆ ಕಲ್ಯಾಣ–ಕರ್ನಾಟಕ ಪ್ರದೇಶದ ಮಹಿಳಾ ಸಾಕ್ಷರತಾ ದರದ ಹೋಲಿಕೆ**




ಆಧಾರ: ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 2019–21

**ನಕ್ಷೆ–2.17**ರಲ್ಲಿ ತೋರಿಸಿರುವಂತೆ ರಾಜ್ಯದ ಸರಾಸರಿ ಶೇಕಡಾ 50.20ಕ್ಕೆ ಪ್ರತಿಯಾಗಿ 10 ಅಥವಾ ಅದಕ್ಕಿಂತ ಹೆಚ್ಚಿನ ವರ್ಷಗಳ ಶಾಲಾ ಶಿಕ್ಷಣವನ್ನು ಹೊಂದಿರುವ ಮಹಿಳೆಯರ ಶೇಕಡಾವಾರು ಪ್ರಮಾಣವು 26.40ರಿಂದ 45ರ ನಡುವಿನ ವ್ಯಾಪ್ತಿಯಲ್ಲಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

**ನಕ್ಷೆ–2.17: ರಾಜ್ಯದೊಂದಿಗೆ ಕಲ್ಯಾಣ–ಕರ್ನಾಟಕ ಪ್ರದೇಶದ ಜಿಲ್ಲೆಗಳ ಹೋಲಿಕೆ**




ಆಧಾರ: ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 2019–21

ಆದರೆ, ಮಂಡಳಿಯು ಮಹಿಳೆಯರು, ಸಾಮಾಜಿಕ ಗುಂಪುಗಳು ಇತ್ಯಾದಿಗಳಲ್ಲಿನ ಸಾಕ್ಷರತೆಯ ಸ್ಥಿತಿಯನ್ನು ವಿಶ್ಲೇಷಿಸಲು ದತ್ತಾಂಶವನ್ನು ಸಂಗ್ರಹಿಸಿರಲಿಲ್ಲ ಅಥವಾ ಆರ್ಥಿಕ ಬೆಳವಣಿಗೆಯ ಪ್ರಮುಖ ಸೂಚಕಗಳಲ್ಲಿ ಒಂದಾದ ಸಮೂಹ ಶಿಕ್ಷಣ ಇಲಾಖೆಯ ಸಮನ್ವಯದಲ್ಲಿ ಸಾಕ್ಷರತಾ ಕಾರ್ಯಕ್ರಮಗಳನ್ನು ಕೈಗೊಂಡಿರಲಿಲ್ಲ.

## 2.13 ಕೌಶಲ್ಯ ಅಭಿವೃದ್ಧಿ ಸೂಚ್ಯಂಕಗಳು

### *2.13.1 ಕೈಗಾರಿಕಾ ತರಬೇತಿ ಸಂಸ್ಥೆಗಳ ಶ್ರೇಣೀಕರಣ*

ಕೌಶಲ್ಯ ಅಭಿವೃದ್ಧಿ ಕೇಂದ್ರಗಳು (ಎಸ್‌ಡಿಸಿ), ವೃತ್ತಿಪರ ತರಬೇತಿ ಪೂರೈಕೆದಾರರು (ವಿಟಿಪಿ), ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ), ಹಾಗೂ ಪಾಲಿಟೆಕ್ನಿಕ್‌ಗಳು/ಎಂಜಿನಿಯರಿಂಗ್ ಕಾಲೇಜುಗಳು ಮುಂತಾದ ಕೌಶಲ್ಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸುವ ವಿವಿಧ ಕೌಶಲ್ಯ ಕಾರ್ಯಕ್ರಮಗಳು/ಯೋಜನೆಗಳ ಮೂಲಕ 400 ಮಿಲಿಯನ್ ಯುವಕರನ್ನು ಬಹು ವ್ಯಾಪಾರ/ವಲಯಗಳಲ್ಲಿ ಉದ್ಯಮ ಸಂಬಂಧಿತ ಕೌಶಲ್ಯ ತರಬೇತಿಯೊಂದಿಗೆ ಸಜ್ಜುಗೊಳಿಸುವ ಗುರಿಯನ್ನು (2022ರ ವೇಳೆಗೆ) ಭಾರತ ಹೊಂದಿದೆ.

ಕೌಶಲ್ಯಾಭಿವೃದ್ಧಿ ಮತ್ತು ವಾಣಿಜ್ಯೋದ್ಯಮ ಮಂತ್ರಾಲಯದಡಿಯಲ್ಲಿ ತರಬೇತಿ ಮಹಾನಿರ್ದೇಶಕರು (ಡಿಜಿಟಿ) ರಾಷ್ಟ್ರದಾದ್ಯಂತ ಎಲ್ಲಾ ಐಟಿಐಗಳನ್ನು ವ್ಯಾಖ್ಯಾನಿಸಲಾದ ಪ್ರಮುಖ ನಿಯತಾಂಕಗಳ ಆಧಾರದ ಮೇಲೆ ಶ್ರೇಣೀಕರಣ ಮಾಡಲು ಮತ್ತು ಸಂಸ್ಥೆಗಳಲ್ಲಿ "ಹೋಲಿಕೆಗಾಗಿ ಮಾನದಂಡ" ಒದಗಿಸಲು ಯೋಜನೆಯೊಂದನ್ನು ಜಾರಿಗೆ ತಂದರು. ಉತ್ತಮ ಪ್ರದರ್ಶನ ನೀಡುವ ಸಂಸ್ಥೆಗಳನ್ನು ಗುರುತಿಸಿ ಆ ಸಂಸ್ಥೆಗಳ ಉತ್ತಮ ಅಭ್ಯಾಸಗಳ ಆಧಾರದ ಮೇಲೆ ಕೆಲವು ನಿಯತಾಂಕಗಳಲ್ಲಿ ಹಿಂದುಳಿದಿರುವ ಸಂಸ್ಥೆಗಳಿಗೆ ಸುಧಾರಿಸಲು ಅವಕಾಶವನ್ನು ಒದಗಿಸುವುದು ಐಟಿಐಗಳನ್ನು ಶ್ರೇಣೀಕರಣ ಮಾಡುವ ಉದ್ದೇಶವಾಗಿತ್ತು. ಐಟಿಐಗಳು, ರಾಜ್ಯ ನಿರ್ದೇಶನಾಲಯಗಳು ಮತ್ತು ಡಿಜಿಟಿಯಂತಹ ವಿವಿಧ ಪಾಲುದಾರರು ವೃತ್ತಿ ಶಿಕ್ಷಣ ಮತ್ತು ತರಬೇತಿ ಪರಿಸರ ವ್ಯವಸ್ಥೆಯ ಒಟ್ಟಾರೆ ಬಲವರ್ಧನೆಗಾಗಿ ಅವರು ಮತ್ತಷ್ಟು ಸುಧಾರಿಸಬಹುದಾದ ಪ್ರಮುಖ ಕ್ಷೇತ್ರಗಳನ್ನು ಕಂಡುಹಿಡಿಯಲು ಶ್ರೇಣೀಕರಣವು ಸಹಾಯ ಮಾಡುತ್ತದೆ.

ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿನ ಐಟಿಐಗಳ ಶ್ರೇಣೀಕರಣಕ್ಕೆ ಸಂಬಂಧಿಸಿದಂತೆ ಮಂಡಳಿಯು ದತ್ತಾಂಶವನ್ನು ಸಂಗ್ರಹಿಸಿ ವಿಶ್ಲೇಷಿಸಲಿಲ್ಲ. ಹೀಗಾಗಿ ಈ ಪ್ರದೇಶದ ಐಟಿಐಗಳಲ್ಲಿ ಮೂಲಸೌಕರ್ಯಕ್ಕೆ ಸಂಬಂಧಿಸಿದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಸ್ಥಿತಿಯಲ್ಲಿ ಮಂಡಳಿಯು ಇರಲಿಲ್ಲ ಎಂಬುದು ಅದರ ಕಾರ್ಯ ಯೋಜನೆಗಳಿಂದ ಸ್ಪಷ್ಟವಾಗುತ್ತದೆ.

### *2.13.2 ಕಲ್ಯಾಣ-ಕರ್ನಾಟಕ ಪ್ರದೇಶದಲ್ಲಿ ಉದ್ಯೋಗ ಸ್ಥಿತಿಯ ದತ್ತಾಂಶದ ಅನುಪಸ್ಥಿತಿ*

ಕೌಶಲ್ಯ ಮತ್ತು ಜ್ಞಾನವು ಯಾವುದೇ ಪ್ರದೇಶದ ಆರ್ಥಿಕ ಬೆಳವಣಿಗೆ ಮತ್ತು ಸಾಮಾಜಿಕ ಅಭಿವೃದ್ಧಿಯ ಪ್ರೇರಕ ಶಕ್ತಿಗಳಾಗಿವೆ. ಹೆಚ್ಚು ನುರಿತ ಮಾನವ ಸಂಪನ್ಮೂಲದ ಮೂಲಕ ಆರ್ಥಿಕತೆಯು ಹೆಚ್ಚು ಲಾಭದಾಯಕ, ಆಧುನಿಕ ಮತ್ತು ಸ್ಪರ್ಧಾತ್ಮಕವಾಗುತ್ತದೆ. ಉದ್ಯೋಗದ ಮಟ್ಟ, ಅದರ ಸಂಯೋಜನೆ ಮತ್ತು ಉದ್ಯೋಗಾವಕಾಶಗಳ ಬೆಳವಣಿಗೆಯು ಪ್ರಾದೇಶಿಕ ಆರ್ಥಿಕತೆ ಸೇರಿದಂತೆ ಯಾವುದೇ ಆರ್ಥಿಕತೆಯ ಅಭಿವೃದ್ಧಿಯ ಪ್ರಕ್ರಿಯೆಯ ನಿರ್ಣಾಯಕ ಸೂಚಕವಾಗಿದೆ.

ಆದರೆ ಮಂಡಳಿಯು ಒಟ್ಟು ಈ ಪ್ರದೇಶದಲ್ಲಿನ ಒಟ್ಟು ಉದ್ಯೋಗ ಮತ್ತು ನಿರುದ್ಯೋಗದ ಬಗ್ಗೆ ದತ್ತಾಂಶವನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡಿರಲಿಲ್ಲ. ಕಲ್ಯಾಣ-ಕರ್ನಾಟಕ ಪ್ರದೇಶದಲ್ಲಿ ಕೌಶಲ್ಯ ಅಭಿವೃದ್ಧಿಗಾಗಿನ ಯೋಜನೆಗಳು/ಯೋಜನೆಗಳ ವಿವರಗಳೂ ಸಹ ಮಂಡಳಿಯಲ್ಲಿ ಲಭ್ಯವಿರಲಿಲ್ಲ

### *2.13.3 ಇಂಜಿನಿಯರಿಂಗ್ ಸಂಶೋಧನೆ ಮತ್ತು ಅಭಿವೃದ್ಧಿ*

ದೇಶದಾದ್ಯಂತ ಹಾಗೂ ಕರ್ನಾಟಕದಲ್ಲಿ ಎಂಜಿನಿಯರಿಂಗ್ ಸಂಶೋಧನೆ ಮತ್ತು ಅಭಿವೃದ್ಧಿಯು ಕಳೆದ ದಶಕದಲ್ಲಿ ವೇಗವರ್ಧಿತ ಚಲನೆಗೆ ಸಾಕ್ಷಿಯಾಗಿದೆ. ಎಂಜಿನಿಯರಿಂಗ್ ಸಂಶೋಧನೆ ಮತ್ತು ಅಭಿವೃದ್ಧಿ ಸೇವೆಗಳು ಒಂದು ಉತ್ಪನ್ನದ ಸಂಪೂರ್ಣ ಜೀವನ ಚಕ್ರದಲ್ಲಿ (ಉತ್ಪನ್ನ ಪರಿಕಲ್ಪನೆ, ವಿನ್ಯಾಸ, ಅಭಿವೃದ್ಧಿ, ಪರೀಕ್ಷೆ, ಉತ್ಪಾದನೆ ಮತ್ತು ನಿರ್ವಹಣೆ) ಹೊಸ ಉತ್ಪನ್ನಗಳ (ಯಂತ್ರಾಂಶ ಅಥವಾ ತಂತ್ರಾಂಶ) ರಚನೆಯಲ್ಲಿನ ಸೇವೆಗಳನ್ನು ಒಳಗೊಂಡಿವೆ.

ರಾಜ್ಯಕ್ಕೆ ಹೆಚ್ಚಿನ ಸಂಖ್ಯೆಯ ಪ್ರಮುಖ ಇಂಜಿನಿಯರಿಂಗ್ ಸಂಶೋಧನೆ ಮತ್ತು ಅಭಿವೃದ್ಧಿ (ಇಆರ್&ಡಿ) ಬಹುರಾಷ್ಟ್ರೀಯ ಕಂಪನಿಗಳು (ಎಮ್‌ಎನ್‌ಸಿ), ಜಾಗತಿಕ ಸಾಮರ್ಥ್ಯ ಕೇಂದ್ರಗಳು (ಜಿಸಿಸಿ) ಮತ್ತು ಎಂಜಿನಿಯರಿಂಗ್ ಸೇವಾ ಪೂರೈಕೆದಾರರನ್ನು (ಇಎಸ್‌ಪಿ) ಹೂಡಿಕೆಗಾಗಿ ಆಕರ್ಷಿಸಲು ಕರ್ನಾಟಕ ಸರ್ಕಾರವು ಇಆರ್&ಡಿ ನೀತಿಯನ್ನು ಜಾರಿಗೆ ತಂದಿತು ಮತ್ತು ನುರಿತ ಪ್ರತಿಭೆಯ ನೆಲೆಗೆ ಸುಲಭವಾದ ಪ್ರವೇಶವನ್ನು ಒಳಗೊಂಡಂತೆ ದೃಢವಾದ ಮತ್ತು ಉತ್ತಮ ಸಂಪರ್ಕ ಹೊಂದಿದ ಪರಿಸರ ವ್ಯವಸ್ಥೆಯನ್ನು ಒದಗಿಸಿತು.

ಆದಾಗ್ಯೂ, ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿಗೆ ಕೊಡುಗೆ ನೀಡಬಹುದಾದ ಅದನ್ನು ಅಳವಡಿಸಿಕೊಳ್ಳುವ ಮತ್ತು ಅನುಷ್ಠಾನಗೊಳಿಸುವ ಉದ್ದೇಶದಿಂದ ಮಂಡಳಿಯು ರಾಜ್ಯ ಸರ್ಕಾರವು ಪ್ರಾರಂಭಿಸಿದ ಹೊಸ ಇಂಜಿನಿಯರಿಂಗ್ ಸಂಶೋಧನೆ ಮತ್ತು ಅಭಿವೃದ್ಧಿ ನೀತಿಯನ್ನು ವಿಶ್ಲೇಷಿಸಲಿಲ್ಲ ಹಾಗೂ ಆ ನೀತಿಗೆ ಅನುಗುಣವಾಗಿ ಯಾವುದೇ ಚಟುವಟಿಕೆಗಳನ್ನು ಪ್ರಸ್ತಾಪವಿಸಲಿಲ್ಲ.

### *2.13.4 ಸ್ಟಾರ್ಟ್‌ಅಪ್‌ಗಳನ್ನು ಉತ್ತೇಜಿಸುವುದು*

ವಾಣಿಜ್ಯೋದ್ಯಮವು ಪ್ರಾದೇಶಿಕ ಕೈಗಾರಿಕಾ ಅಭಿವೃದ್ಧಿಗೆ ನಿರ್ಣಾಯಕ ಅಂಶವಾಗಿ ಗುರುತಿಸಲ್ಪಟ್ಟಿದೆ ಮತ್ತು ಉದ್ಯೋಗ ಸೃಷ್ಟಿ, ಆರ್ಥಿಕ ಬೆಳವಣಿಗೆ ಮತ್ತು ಹೊಸ ಬದಲಾವಣೆಗೆ ಪ್ರಮುಖ ಸಾಧನಗಳಾಗಿವೆ. ಸ್ಟಾರ್ಟ್–ಅಪ್‌ಗಳ ಪ್ರಭುತ್ವವು ವ್ಯವಸ್ಥಿತವಾಗಿ ಮತ್ತು ಬಲವಾಗಿ ಪ್ರದೇಶಗಳಾದ್ಯಂತ ಸ್ಥಳೀಯ ಉದ್ಯೋಗ ಬೆಳವಣಿಗೆಗೆ ಸಂಬಂಧಿಸಿದೆ.

ಆದಾಗ್ಯೂ, ಮಂಡಳಿಯು ವಾಣಿಜ್ಯೋದ್ಯಮ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಲು ಯಾವುದೇ ಸೂಚಕ ಚೌಕಟ್ಟನ್ನು ನಿರ್ದಿಷ್ಟಪಡಿಸಿಲ್ಲ ಅಥವಾ ಪ್ರದೇಶದಲ್ಲಿ ಅಂತಹ ಚಟುವಟಿಕೆಗಳನ್ನು ಹೊಂದಿರಲಿಲ್ಲ, ಹೀಗಾಗಿ ನವೀನ ಆಲೋಚನೆಗಳೊಂದಿಗೆ ಉತ್ಸಾಹಿ ಉದ್ಯಮಿಗಳಿಗೆ ವೇದಿಕೆಯನ್ನು ಒದಗಿಸಲು ಮಂಡಳಿಯು ವಿಫಲವಾಗಿದೆ.

## 2.14 ಪ್ರವಾಸೋದ್ಯಮ ಸಾಮರ್ಥ್ಯ

ಪ್ರವಾಸೋದ್ಯಮ ಕ್ಷೇತ್ರವು ದೇಶದ ಆರ್ಥಿಕ ಬೆಳವಣಿಗೆಯನ್ನು ಹೆಚ್ಚಿಸುವ ಪ್ರಮುಖ ಕ್ಷೇತ್ರಗಳಲ್ಲಿ ಒಂದಾಗಿದೆ. ಕರ್ನಾಟಕ ರಾಜ್ಯವು ದೇಶೀಯ ಪ್ರವಾಸಿಗರಲ್ಲಿ ನಾಲ್ಕನೇ ಆದ್ಯತೆಯ ತಾಣವಾಗಿದೆ ಮತ್ತು ಪ್ರವಾಸೋದ್ಯಮ ವಲಯದಲ್ಲಿ ಹೂಡಿಕೆಗೆ ಮೂರನೇ ಆದ್ಯತೆಯ ತಾಣವಾಗಿದೆ.

ರಾಜ್ಯ ಜಿಡಿಪಿಗೆ ಪ್ರವಾಸೋದ್ಯಮ ಕ್ಷೇತ್ರದ ಕೊಡುಗೆಯನ್ನು ಹೆಚ್ಚಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರವು ಕರ್ನಾಟಕ ಪ್ರವಾಸೋದ್ಯಮ ನೀತಿ 2015–20ನ್ನು ಜಾರಿಗೊಳಿಸಿತು. ಈ ನೀತಿಯು ರಾಜ್ಯದಲ್ಲಿ ಸುಸ್ಥಿರ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಸಂಬಂಧಿತ ಮೂಲಸೌಕರ್ಯ, ಪರಿಣಾಮಕಾರಿ ಸಾಂಸ್ಥಿಕ ಕಾರ್ಯವಿಧಾನಗಳು ಮತ್ತು ಈ ಗುರಿಗಳನ್ನು ತಲುಪಲು ವರ್ಧಿತ ಸಾಮರ್ಥ್ಯಗಳಿಂದ ಬೆಂಬಲಿತವಾದ ಒಂದು ಸಂಯೋಜಿತ ವಿಧಾನವನ್ನು ಕಲ್ಪಿಸಿತ್ತು. ನೀತಿಯು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿಗೆ ಒತ್ತು ನೀಡಿತ್ತು.

ಆದಾಗ್ಯೂ, ಮಂಡಳಿಯು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದ ಸಂಭಾವ್ಯ ಪ್ರವಾಸೋದ್ಯಮ ಸ್ಥಳಗಳು ಮತ್ತು ಲಭ್ಯವಿರುವ ಮೂಲಸೌಕರ್ಯ ಸೌಲಭ್ಯಗಳ ಬಗ್ಗೆ ಯಾವುದೇ ಮೌಲ್ಯಮಾಪನವನ್ನು ಕೈಗೊಂಡಿರಲಿಲ್ಲ. ರಾಜ್ಯ ಪ್ರವಾಸೋದ್ಯಮ ನೀತಿಯಡಿಯಲ್ಲಿ ಹೂಡಿಕೆ ಸಹಾಯಧನಗಳನ್ನು ಪಡೆದ ಕಲ್ಯಾಣ ಕರ್ನಾಟಕ ಪ್ರದೇಶದ ಘಟಕಗಳಿಗೆ ಸಂಬಂಧಿಸಿದ ಯಾವುದೇ ದತ್ತಾಂಶವನ್ನೂ ಸಹ ಮಂಡಳಿಯು ಹೊಂದಿರಲಿಲ್ಲ.

## 2.15 ನೀರು ಸರಬರಾಜು ಸೂಚ್ಯಂಕಗಳು

ಸಾಕಷ್ಟು ಪ್ರಮಾಣದ ಸುರಕ್ಷಿತ ಕುಡಿಯುವ ನೀರನ್ನು ಹೊಂದುವುದು ಮಾನವ ಅಸ್ತಿತ್ವಕ್ಕೆ ಮೂಲಭೂತ ಅವಶ್ಯಕತೆಯಾಗಿದೆ ಮತ್ತು ಆರೋಗ್ಯ ಮತ್ತು ಆಹಾರ ಭದ್ರತೆ ಸೇರಿದಂತೆ ಜೀವನೋಪಾಯಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ಬಹಳ ಮಹತ್ವದ ಪ್ರಭಾವವನ್ನು ಹೊಂದಿದೆ. ಡಾ.ನಂಜುಂಡಪ್ಪ ಸಮಿತಿಯು ಸೂಚಕ ಚೌಕಟ್ಟು 40 ಎಲ್‌ಪಿಸಿಡಿ ಅಥವಾ ಅದಕ್ಕಿಂತ ಹೆಚ್ಚಿನ ಕುಡಿಯುವ ನೀರಿನ ಸೌಲಭ್ಯವನ್ನು ಹೊಂದಿರುವ ವಾಸಸ್ಥಳಗಳ ಶೇಕಡಾವಾರು ಪ್ರಮಾಣವನ್ನು ಪ್ರಾದೇಶಿಕ ಹಿಂದುಳಿದಿರುವಿಕೆಯನ್ನು ನಿರ್ಧರಿಸುವ ಸೂಚಕವಾಗಿ ಪರಿಗಣಿಸಿತ್ತು.

ಆದರೆ ಮಂಡಳಿಯು ಈ ಮಧ್ಯಸ್ಥಿಕೆಗಳ ಅನುಷ್ಠಾನದಲ್ಲಿನ ಪ್ರಗತಿಯನ್ನು ನಿರ್ಣಯಿಸಲು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ವಸತಿ ಮಟ್ಟದ ದತ್ತಾಂಶವನ್ನು ಸಂಗ್ರಹಿಸಿರಲಿಲ್ಲ. ಆದ್ದರಿಂದ, ನೀರಿನ ಪೂರೈಕೆಯ ಸ್ಥಿತಿ ಮತ್ತು ಈ ವಲಯದಲ್ಲಿನ ಯಾವುದೇ ಸುಧಾರಣೆಯನ್ನು ಲೆಕ್ಕಪರಿಶೋಧನೆಯು ಖಚಿತ ಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ.

## 2.16 ನೈರ್ಮಲ್ಯ – ಸ್ವಚ್ಛ ಸರ್ವೇಕ್ಷಣೆ

ಸ್ವಚ್ಛ ಸರ್ವೇಕ್ಷಣ್[6] ಎಂಬುದು ಭಾರತದಾದ್ಯಂತ ನಗರಗಳು ಮತ್ತು ಪಟ್ಟಣಗಳಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯದ ವಾರ್ಷಿಕ ಸಮೀಕ್ಷೆಯಾಗಿದ್ದು, ಸ್ವಚ್ಛ ಭಾರತ ಅಭಿಯಾನದ ಭಾಗವಾಗಿ ಅದನ್ನು ಪ್ರಾರಂಭಿಸಲಾಯಿತು ಹಾಗೂ ಅದು ಭಾರತವನ್ನು ಸ್ವಚ್ಛ ಮತ್ತು ಬಯಲು ಶೌಚದಿಂದ ಮುಕ್ತ ಮಾಡುವ ಗುರಿಯನ್ನು ಹೊಂದಿದೆ. 2016ರಲ್ಲಿ ಕೈಗೊಂಡ ಮೊದಲ ಸಮೀಕ್ಷೆಯು 73 ನಗರಗಳನ್ನು ಒಳಗೊಂಡಿತ್ತು. 2021ರ ವೇಳೆಗೆ ಅದರ ಆರನೇ ಆವೃತ್ತಿಯಲ್ಲಿ, ಶ್ರೇಯಾಂಕದ ವ್ಯಾಯಾಮದ ವ್ಯಾಪ್ತಿಯನ್ನು ಹೆಚ್ಚಿಸುವ ಪ್ರಯತ್ನದಲ್ಲಿ ಮತ್ತು ಸಮಯೋಚಿತ ಮತ್ತು ನವೀನ ರೀತಿಯಲ್ಲಿ ಅಭಿಯಾನದ ಉಪಕ್ರಮಗಳನ್ನು ಸಕ್ರಿಯವಾಗಿ ಕಾರ್ಯಗತಗೊಳಿಸಲು ಪಟ್ಟಣಗಳು ಮತ್ತು ನಗರಗಳನ್ನು ಉತ್ತೇಜಿಸಲು 4320 ನಗರಗಳನ್ನು ವ್ಯಾಪ್ತಿಗೊಳಪಡಿಸಿ ಸಮೀಕ್ಷೆಯನ್ನು ನಡೆಸಲಾಯಿತು

## 2.17 ಅರಣ್ಯ ವ್ಯಾಪ್ತಿ ಮತ್ತು ಅರಣ್ಯೀಕರಣ ಕಾಮಗಾರಿಗಳು

2017–18ನೇ ವರ್ಷದ ಭಾರತ ಸರ್ಕಾರದ ಕೃಷಿ ಸಚಿವಾಲಯದ ಭೂಬಳಕೆಯ ಅಂಕಿಅಂಶಗಳ ಮಾಹಿತಿಯ ಪ್ರಕಾರ, ಕರ್ನಾಟಕದಲ್ಲಿ ಒಟ್ಟು ಅರಣ್ಯ ಪ್ರದೇಶವು 30.73 ಲಕ್ಷ ಹೆಕ್ಟೇರ್ ಆಗಿದ್ದು ಅದು ರಾಜ್ಯದ ಒಟ್ಟು ಭೂಪ್ರದೇಶದ ಶೇಕಡಾ 16.13ರಷ್ಟಿದೆ.


2021ರ ಅರಣ್ಯ ಮೌಲ್ಯಮಾಪನ ವರದಿಯ ಪ್ರಕಾರ ಜಿಲ್ಲೆಯ ಒಟ್ಟು ಭೌಗೋಳಿಕ ಪ್ರದೇಶದ ಶೇಕಡಾವಾರು ಅರಣ್ಯ ಪ್ರದೇಶವು ಕೊಪ್ಪಳ ಮತ್ತು ರಾಯಚೂರಿನಲ್ಲಿ ಶೇಕಡಾ ಒಂದಕ್ಕಿಂತ ಕಡಿಮೆಯಿದ್ದಿತು, ಬೀದರ್ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಅದು ಶೇಕಡಾ ಎರಡಕ್ಕಿಂತ ಕಡಿಮೆಯಿದ್ದಿತು.

2015–16ರಿಂದ 2020–21ರ ಅವಧಿಯಲ್ಲಿ ಮಂಡಳಿಯು ಎಎಪಿಗಳಲ್ಲಿ ಸೇರಿಸಿದ್ದ 28,038 ಕಾಮಗಾರಿಗಳಲ್ಲಿ ಕೇವಲ 10 ಕಾಮಗಾರಿಗಳು (ಒಟ್ಟು ಕಾಮಗಾರಿಗಳ ಶೇಕಡಾ 1ಕ್ಕಿಂತ ಕಡಿಮೆ) ₹3.18 ಕೋಟಿಯ ಅಲ್ಪ ಹಂಚಿಕೆಯೊಂದಿಗೆ ಅರಣ್ಯಕ್ಕೆ ಸಂಬಂಧಿಸಿದ್ದಾಗಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

[6] ಕ್ವಾಲಿಟಿ ಕೌನ್ಸಿಲ್ ಆಫ್ ಇಂಡಿಯಾ (ಕ್ಯೂಸಿಐ) ಸಂಸ್ಥೆಯನ್ನು ತನ್ನ ಅನುಷ್ಠಾನ ಪಾಲುದಾರರಾಗಿ ಸ್ವಚ್ಛ ಭಾರತ್ ಮಿಷನ್–ನಗರ (ಎಸ್‌ಬಿಎಮ್–ಯು) ಅಡಿಯಲ್ಲಿ ಎಲ್ಲಾ ನಗರಗಳಿಗೆ ಶ್ರೇಯಾಂಕ ನೀಡಲು ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ನಡೆಸುತ್ತದೆ.

2014–15 ಮತ್ತು 2020–21ರ ನಡುವಿನ ಅರಣ್ಯ ಪ್ರದೇಶದಲ್ಲಿನ ಶೇಕಡಾವಾರು ಬದಲಾವಣೆಯನ್ನು **ನಕ್ಷೆ–2.18**ರಲ್ಲಿ ತೋರಿಸಲಾಗಿದೆ. ಮೂರು ಜಿಲ್ಲೆಗಳಲ್ಲಿ ಅರಣ್ಯ ಪ್ರದೇಶದಲ್ಲಿ ಸ್ವಲ್ಪ ಹೆಚ್ಚಳ ಕಂಡುಬಂದರೆ, ಇತರ ಮೂರು ಜಿಲ್ಲೆಗಳಲ್ಲಿ ಅರಣ್ಯ ಪ್ರದೇಶವು ಕಡಿಮೆಯಾಗಿತ್ತು.

**ನಕ್ಷೆ–2.18: ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ 2014 ಮತ್ತು 2021ರ ನಡುವೆ ಅರಣ್ಯದ ವ್ಯಾಪ್ತಿಯಲ್ಲಿನ ಬದಲಾವಣೆ**




ಆಧಾರ: ಅರಣ್ಯ ಇಲಾಖೆಯು ಒದಗಿಸಿದ ಮಾಹಿತಿ

## 2.18 ವಾಯು ಸಾರಿಗೆ

ನಾಗರಿಕ ವಿಮಾನಯಾನ ಕ್ಷೇತ್ರವು ವೈಯಕ್ತಿಕ ಮತ್ತು ಸಾಮಾಜಿಕ ಅಗತ್ಯತೆಗಳನ್ನು ಪೂರೈಸಲು ವೇಗವಾದ ಸಾರಿಗೆಯನ್ನು ಒದಗಿಸುವುದರ ಜೊತೆಗೆ ಉದ್ಯೋಗ ಮತ್ತು ವ್ಯಾಪಾರ ಅವಕಾಶಗಳನ್ನು ಸೃಷ್ಟಿಸುವ ಗಮನಾರ್ಹ ಸಾಮರ್ಥ್ಯವನ್ನು ಹೊಂದಿದೆ. ಭಾರತ ಸರ್ಕಾರದ ರಾಷ್ಟ್ರೀಯ ನಾಗರಿಕ ವಿಮಾನಯಾನ ನೀತಿ 2016ರ (ಎನ್‌ಸಿಎಪಿ 2016) ಅಡಿಯಲ್ಲಿ ಕಲ್ಪಿಸಲಾದ ಉಡಾನ್ ಯೋಜನೆಯು ದೇಶಾದ್ಯಂತ ಪ್ರಾದೇಶಿಕ ನಗರ ಕೇಂದ್ರಗಳಲ್ಲಿ ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಪಡಿಸುವ ಮೂಲಕ ಹೆಚ್ಚಿನ ಪ್ರಾದೇಶಿಕ ಸಂಪರ್ಕವನ್ನು ಸಾಧಿಸಲು ಮತ್ತು ಪ್ರಾದೇಶಿಕ ಕೇಂದ್ರಗಳಲ್ಲಿ ವಾಯು ಸಾರಿಗೆ ಸೌಲಭ್ಯಗಳನ್ನು ಅಭಿವೃದ್ಧಿಪಡಿರುಸ ಕಡೆಗೆ ಗಮನ ಹರಿಸಿದೆ.

ರಾಯಚೂರಿಗೆ ಮಂಜೂರಾದ ವಿಮಾನ ನಿಲ್ದಾಣ ಕಾಮಗಾರಿ ಇನ್ನೂ ಆರಂಭವಾಗದಿರುವುದನ್ನು ಲೆಕ್ಕ ಪರಿಶೋಧನೆಯು ಗಮನಿಸಿತು. ವಿಶ್ವ ಪರಂಪರೆಯ ಕೇಂದ್ರವಾದ ಹಂಪೆ, ತುಂಗಭದ್ರಾ ಅಣೆಕಟ್ಟು, ಸಂಡೂರು ಗಣಿ ಮತ್ತು ಬಳ್ಳಾರಿ ಸುತ್ತಮುತ್ತಲಿನ ಕೈಗಾರಿಕಾ ಪ್ರದೇಶಗಳನ್ನು ಹೊಂದಿರುವ ಬಳ್ಳಾರಿಗೆ ವಾಯು ಸಾರಿಗೆ ನೀಡುವ ಪ್ರಸ್ತಾವನೆ ಇನ್ನೂ ಪರಿಶೀಲನೆಯಲ್ಲಿದೆ.

ಹೀಗೆ, ಮಂಡಳಿಯು ನೀತಿ ನಿರೂಪಣೆ, ಯೋಜನೆ ಮತ್ತು ಮೇಲ್ವಿಚಾರಣೆ ಉದ್ದೇಶಗಳಿಗಾಗಿ ಅಭಿವೃದ್ಧಿ ಸೂಚಕಗಳ ದತ್ತಾಂಶವನ್ನು ಸಂಗ್ರಹಿಸಲಿಲ್ಲ, ವಿಶ್ಲೇಷಿಸಲಿಲ್ಲ ಮತ್ತು ಬಳಸಲಿಲ್ಲ. ಅಂತಹ ಅಧ್ಯಯನಗಳನ್ನು ರಾಜ್ಯ ಮಟ್ಟದಲ್ಲಿ ನಡೆಸಲಾಗುತ್ತಿದೆ ಮತ್ತು ವಿಶ್ಲೇಷಿಸಲಾಗುತ್ತಿದೆ ಎಂದು ಮಂಡಳಿಯು ತಿಳಿಸಿತು (ಜುಲೈ 2022).

ಕಲ್ಯಾಣ ಕರ್ನಾಟಕ ಪ್ರದೇಶದ ಒಟ್ಟಾರೆ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಮತ್ತು ಪ್ರಾದೇಶಿಕ ಅಸಮಾನತೆಗಳನ್ನು ನಿವಾರಿಸಲು ಮಂಡಳಿಯನ್ನು ಸ್ಥಾಪಿಸಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಆರೋಗ್ಯ, ಶಿಕ್ಷಣ, ಕೃಷಿ, ಪೌಷ್ಟಿಕಾಂಶ, ಕೌಶಲ್ಯ ಅಭಿವೃದ್ಧಿ ಮುಂತಾದವುಗಳ ಕುರಿತಾದ ದತ್ತಾಂಶಗಳ ವಿಶ್ಲೇಷಣೆಯು ನೀತಿ ನಿರೂಪಣೆ, ಯೋಜನೆ ಮತ್ತು ಕಾರ್ಯಕ್ರಮ ಅನುಷ್ಠಾನಕ್ಕೆ ಪ್ರಮುಖವಾಗಿರುತ್ತದೆ.